ಸುಬ್ರಹ್ಮಣ್ಯ ಭಾರತಿ

ಡಾ: ಕಾರ್ಲೋಸ್



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ಸುಬ್ರಹ್ಮಣ್ಯ ಭಾರತಿ

ಡಾ. ಕಾರ್ಲೋಸ್

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦೦೦೨

SUBRAMANYA BHARATHI—Writen by Dr. Karlos and Published by Karnataka Sahitya Akademy, Nrupatunga Road, Bangalore-560002.

First Publication 1994 Pages : viii+52

ಮೊದಲನೇ ಮುದ್ರಣ ೧೯೯೪

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು–೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು ; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ; ಜಡಚೈಲುಗಳನ್ನು ನಿರ್ಮಿಸುವುದಿಲ್ಲ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರುಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ, ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪
ಬೆಂಗಳೂರು

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಡಾ. ಕಾರ್ಲೋಸ್

ಸುಬ್ರಮಣ್ಯಭಾರತಿ

ಸುಬ್ರಮಣ್ಯಭಾರತಿಯವರು ೧೮೮೨ರ ಡಿಸೆಂಬರ್ ೧೧ರಂದು ತಿರುನಲ್ವೇಲಿ ಜಿಲ್ಲೆಯ ಎಟ್ಟಾಯಪುರಂ ಎಂಬ ಸಣ್ಣಹಳ್ಳಿಯಲ್ಲಿ ಜನಿಸಿದರು.

ಅವರ ತಾತ ಸುಬ್ಬಯ್ಯರ್‌ರವರು ತಿರುನಲ್ವೇಲಿ ಜಿಲ್ಲೆಯ ಸೀವಲಪೇರಿಯವರು, ತುಂಬಾ ಜಮೀನನ್ನು ಹೊಂದಿದ್ದರು. ಆದರೆ ಸುಮಾರು ವರ್ಷಗಳವರೆಗೆ ಮಕ್ಕಳನ್ನು ಪಡೆದಿರಲಿಲ್ಲ. ಬಡಬಗ್ಗರಿಗೆ ಧನಸಹಾಯ ಮಾಡುವ ಅಭ್ಯಾಸ ಇಟ್ಟುಕೊಂಡಿದ್ದ ಇವರು "ಮಕ್ಕಳನ್ನು ಕರುಣಿಸು" ಎಂದು ಕೇಳಲು ಸುಮಾರು ಪವಿತ್ರ ಯಾತ್ರಾ ಸ್ಥಳಗಳಿಗೆ ಭೇಟಿ ನೀಡುತ್ತಿದ್ದರು. ಕೊನೆಗೆ ಅವರ ಪತ್ನಿ (ದೇವರ ಕರುಣೆಯೋ ಎಂಬಂತೆ) ಇಬ್ಬರು ಮಕ್ಕಳಿಗೆ ಜನ್ಮವಿತ್ತರು. ಅದರಲ್ಲಿ ಒಂದು ಗಂಡುಮಗು ಮತ್ತೊಂದು ಹೆಣ್ಣುಮಗು. ಗಂಡುಮಗುವಿಗೆ ಚಿನ್ನಾಚ್ಚಾಮಿ ಎಂತಲೂ ಅವನು ಸೌಂದರರಾಜನ್ ಎಂಬ ಹೆಸರನ್ನೂ ಸಹ ಪಡೆದಿದ್ದನು, ಹೆಣ್ಣುಮಗುವಿಗೆ ಕುಪ್ಪಮ್ಮಾಳ್ ಎಂತಲೂ ಕರೆದರು. ಈ ಇಬ್ಬರೂ ಮಕ್ಕಳನ್ನು ಸುಬ್ಬಯ್ಯರ್‌ರವರು ತಮ್ಮ ಎರಡು ಕಣ್ಣುಗಳಂತೆ ಸಾಕಿ ಬೆಳೆಸಿ ಮುಂದೆ ತಂದರು.

ಬೆಳೆದು ನಿಂತ ತಮ್ಮ ಮಗಳನ್ನು ತಮ್ಮ ಜಿಲ್ಲೆಗೇ ಸೇರಿದ ಸದ್ಗುಣ ಸಂಪನ್ನರಾದ ವಾಗೈಕುಳಂ ಎಂಬ ಕುಟುಂಬದವರಿಗೆ ಕೊಟ್ಟು

ಧಾರೆ ಎರೆದರು. ತಮ್ಮ ಮಗ ಎಲ್ಲ ಶಾಸ್ತ್ರ ಮತ್ತು ತರ್ಕಗಳಲ್ಲಿ ಪರಿಣಿತನಾಗುತ್ತಿದ್ದುದನ್ನು ಕಂಡು ತುಂಬಾ ಹೆಮ್ಮೆಪಟ್ಟರು. ಆದರೆ ದುರದೃಷ್ಟವಶಾತ್ ಚಿನ್ನಸ್ವಾಮಿ ಇನ್ನೂ ತುಂಬಾ ಚಿಕ್ಕವನಿರಬೇಕಾದರೆ ಸುಬ್ಬಯ್ಯಾರ್‌ರವರು ಕೊನೆಯುಸಿರೆಳೆದರು.

ಆದರೆ ಚಿನ್ನಸ್ವಾಮಿಗೆ ಒಳ್ಳೆಯ ವಿದ್ಯಾಭ್ಯಾಸ ಪಡೆದು ಎಟ್ಟಾಯಪುರಂ ಸಂಸ್ಥಾನದಲ್ಲಿ ಉದ್ಯೋಗಕ್ಕೆ ಸೇರಿಕೊಳ್ಳಬೇಕೆಂಬ ಆಸೆ ಇದ್ದುದರಿಂದ ತಮ್ಮ ತಾಯಿಯ ಜೊತೆಯಲ್ಲಿಯೇ ಇರಲು ಎಟ್ಟಾಯಪುರಂಗೆ ಬಂದರು. ಉತ್ತಮ ಪಾಂಡಿತ್ಯವನ್ನು ಪಡೆದ ವಿದ್ವಾಂಸರಿಗೆ ರಾಜ ಪ್ರೋತ್ಸಾಹ ನೀಡುತ್ತಿದ್ದನು. ಆ ಎಟ್ಟಾಯಪುರಂ ರಾಜನ ಆಸ್ಥಾನದಲ್ಲಿ ವಿದ್ವಾಂಸರು ತಮಿಳಿನ ಬಗ್ಗೆ ಸಂಶೋಧನೆಗಳು, ಚರ್ಚೆಗಳನ್ನು ನಡೆಸುತ್ತಿದ್ದರು. ಚಿನ್ನಸ್ವಾಮಿ ತಮಿಳು, ಆಂಗ್ಲ, ಗಣಿತ ಹಾಗೂ ತರ್ಕಶಾಸ್ತ್ರಗಳಲ್ಲಿ ಪಾರಂಗತನಾಗಿದ್ದನು. ಹಾಗಾಗಿ ಎಟ್ಟಾಯಪುರಂ ರಾಜನಿಂದ ತುಂಬಾ ಗೌರವಿಸಲ್ಪಟ್ಟಿದ್ದನು.

ಚಿನ್ನಸ್ವಾಮಿ ತನ್ನ ತಾಯಿಯ ಅಣ್ಣನ (ಮಾವನ) ಮಗಳಾದ ಲಕ್ಷ್ಮಿ ಎಂಬುವವರನ್ನು ಮದುವೆಯಾದನು. ಚಿನ್ನಸ್ವಾಮಿ ಎಷ್ಟು ಪಾಂಡಿತ್ಯ ಪಡೆದಿದ್ದನೋ ಅಷ್ಟೇ ಮುಂಗೋಪಿಯಾಗಿದ್ದನು. ಅವನು ಎಟ್ಟಾಯಪುರಂನಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿಯಾಗಿದ್ದರೂ ಸಹ ಅವನ ಹೆಂಡತಿ ಹಾಗೂ ನೆಂಟರಿಷ್ಟರು ಅವನ ಎದುರಿನಲ್ಲಿ ನಿಂತು ಮಾತನಾಡಲೂ ಸಹ ಹೆದರುತ್ತಿದ್ದರು. ಈ ಚಿನ್ನಸ್ವಾಮಿ ಮತ್ತು ಲಕ್ಷ್ಮಿ ಎಂಬ ಜೋಡಿಗೆ ಹುಟ್ಟಿದ ಮಗನೇ ಸುಬ್ರಮಣ್ಯಭಾರತಿ. ಸುಬ್ರಮಣ್ಯಭಾರತಿ ೫ ವರ್ಷದವನಿದ್ದಾಗಲೇ ಅವನ ತಾಯಿ ತೀರಿಕೊಂಡರು. ತನ್ನ ಹೆಂಡತಿಯ ಸಾವಿನ ನಂತರ ತನ್ನಿಬ್ಬರು ಮಕ್ಕಳನ್ನು ಬೆಳೆಸಿ ಮೇಲಕ್ಕೆ ತರಲು ಚಿನ್ನಸ್ವಾಮಿ ಮತ್ತೆ ತಮ್ಮ ಸಂಬಂಧಿಕರಲ್ಲೇ ಒಬ್ಬರಾದ ವಳ್ಳಿಯಮ್ಮಾಳ್ ಎಂಬುವವರನ್ನು ೧೮೯೧ರಲ್ಲಿ ವಿವಾಹ ಮಾಡಿದರು. ಚಿನ್ನಸ್ವಾಮಿ ತನ್ನ ಎರಡನೆಯ ಮದುವೆಯ ಆಚರಣೆಯ

ಸಂದರ್ಭದಲ್ಲಿಯೇ ಸುಬ್ರಮಣ್ಯಭಾರತಿಗೆ ಉಪನಯನ ಮಾಡಿದರು. ಮಗು ಸುಬ್ರಮಣ್ಯಭಾರತಿ ತಂದೆಗೆ ತುಂಬಾ ಹೆದರುತ್ತಿದ್ದನು. ಚಿನ್ನಚ್ಚಾಮಿ ಸುಬ್ರಮಣ್ಯಭಾರತಿಗೆ ಗಣಿತವನ್ನು ಕಲಿಸಬೇಕೆಂಬ ಆಸಕ್ತಿ ಹೊಂದಿದ್ದನು. ವಿಶೇಷವಾಗಿ ತಮ್ಮ ಯೌವನದ ದಿನಗಳಲ್ಲಿ ಅಣ್ಣಾಮಲೈರೆಡ್ಡಿಯಾರ್‌ರವರ ಕವನಗಳಿಂದ ಸುಬ್ರಮಣ್ಯಭಾರತಿಯುವರು ಪ್ರಭಾವಿತರಾಗಿದ್ದನ್ನು ಇತಿಹಾಸಜ್ಞರು ತಿಳಿಸಿದ್ದಾರೆ. ಅಣ್ಣಾಮಲೈ ರೆಡ್ಡಿಯಾರ್‌ರವರ ಕವನಗಳು ಸುಬ್ರಮಣ್ಯಭಾರತಿಯುವರ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿದವು. ಸುಬ್ರಮಣ್ಯಭಾರತಿ ತನಗಿಂತ ಹಿರಿಯ ವಿದ್ವಾಂಸರ ಜೊತೆ ಕುಳಿತು ಚರ್ಚಿಸಿ ಒಂದು ರೀತಿ ಅವರೆಲ್ಲರ ಪಾಂಡಿತ್ಯವನ್ನೂ ಮೀರಿಸುತ್ತಿದ್ದನು. ಇದರಿಂದ ಚಿನ್ನಾಚ್ಚಾಮಿ ತುಂಬಾ ಸಂತೋಷಪಟ್ಟನಾದರೂ ಸಹ ಒಂದು ದಿನವೂ ಸಹ ತನ್ನ ಆ ಸಂತೋಷವನ್ನು ತನ್ನ ಮಗನ ಮುಂದೆ ತೋರ್ಪಡಿಸಲಿಲ್ಲ.

ಎಷ್ಟೋ ಸಾರಿ ಸುಬ್ರಮಣ್ಯನು ತನ್ನ ತಾತನ (ತಾಯಿಯ ತಂದೆ) ಜೊತೆಯಲ್ಲಿಯೇ ತಂಗಿರುತ್ತಿದ್ದನು. ಅವನು ಎಟ್ಟಾಯಪುರಂಗೆ ಹೋದಾಗ ತಾನು ರಚಿಸಿದ ಕತೆಗಳನ್ನು ರಾಜನಿಗೆ ಹೇಳುತ್ತಿದ್ದ. ರಾಜನು ಆ ಕತೆಗಳನ್ನೆಲ್ಲಾ ಕೇಳಿ ಆನಂದಿಸುತ್ತಿದ್ದನು. ಆದರೆ ತನ್ನ ತಂದೆ ಮಾತ್ರ ಮಗನ ಬಗ್ಗೆ ಸದಾ ಖಡಾಖಂಡಿತನಾಗಿರುತ್ತಿದ್ದನು, ಸಲುಗೆಯಿಂದಿರುತ್ತಿರಲಿಲ್ಲ. ಆ ಒಂದು ಕಠಿಣ ಕ್ರಮವನ್ನು ಸುಬ್ರಮಣ್ಯ ಭಾರತಿಯುವರು ಈ ಕೆಳಗಿನ ಒಂದು ಕವನದಲ್ಲಿ ವ್ಯಕ್ತಪಡಿಸಿರುವುದನ್ನು ಕಾಣಬಹುದು.

"ನನ್ನಂತಹ ಹುಡುಗರು, ನನ್ನ ವಯಸ್ಸಿನ ಹುಡುಗರು
ಅವರ ಯವ್ವನದ ವರ್ಷಗಳಲ್ಲಿ
ಚೆನ್ನಾಗಿ ಆಡಬಹುದಿತ್ತು. ಓಡಬಹುದಿತ್ತು.
ನದಿ ಕೊಳಗಳಲ್ಲಿ ಈಜಬಹುದಿತ್ತು

ಅನೇಕ ಜಾತಿಯ ಮರಗಳನ್ನು ಹತ್ತಿ ಇಳಿಯುವುದರಲ್ಲಿ
ಖುಷಿ ಪಡೆಯಬಹುದಿತ್ತು.
ಆದರೆ ನಾನು
ನಮ್ಮ ತಂದೆಯ ಭಯದಲ್ಲಿ ಹಿಡಿಯಲ್ಪಟ್ಟಿದ್ದೆ
ಬೀದಿಯಲ್ಲಾಡಿದ ಆ ಹುಡುಗರ ಜೊತೆ
ನಾನೆಂದೂ ಸೇರಲಾಗಲಿಲ್ಲ.
ಪುಸ್ತಕದ ಜೊತೆಯಲ್ಲಿಯೇ ಬಿಟ್ಟರು ಒಂಟಿಯಾಗಿ
ನಾನು ನನಗೆ ಜೊತೆಗಾರರಿಲ್ಲದ್ದಕ್ಕೆ ತುಂಬಾ ದುಃಖಪಟ್ಟೆ.

ಅವರು ತಮ್ಮ ಯವ್ವನದ ದಿನಗಳಲ್ಲಿ ರಚಿಸಿದ ಕವನಗಳನ್ನು ಹಿರಿಯ ವಿದ್ವಾಂಸರಿಗೆ ತೋರಿಸುತ್ತಿದ್ದರು. ಹೀಗೆ ೧೮೯೩ರಲ್ಲಿ ಅವರಿಗೆ ಎಟ್ಟಾಯಪುರಂ ವಿದ್ವಾಂಸರಿಂದ "ಭಾರತಿ" ಎಂಬ ಹೆಸರು ಕೊಡಲ್ಪಟ್ಟಿತು.

ಅದೇ ವೇಳೆಯಲ್ಲಿ ಸುಬ್ರಮಣ್ಯಭಾರತಿಯವರ ಚಿಕ್ಕಮ್ಮ ಕುಪ್ಪಮ್ಮಾಳ್ ಮತ್ತು ಅವರ ಪತಿ ಕಾಶಿಗೆ ಹೋದರು.

ಆಗ ಭಾರತಿಯವರು ತಿರುನಲ್ವೇಲಿಯ ಹಿಂದೂ ಕಾಲೇಜಿಗೆ ಸೇರಿ ೯ನೇ ತರಗತಿಯವರೆಗೆ ಓದಿದರು. ೧೮೯೭ರಲ್ಲಿ ತಮ್ಮ ೧೪ನೇ ವಯಸ್ಸಿನಲ್ಲಿ ೭ ವರ್ಷದ ಚೆಲ್ಲಮ್ಮಾಳ್ ಎಂಬುವವರನ್ನು ವಿವಾಹವಾದರು.

ಮದುವೆಯ ಒಂದು ವರ್ಷದ ನಂತರ ಭಾರತಿಯವರ ತಂದೆ ನಿಧನರಾದ್ದರಿಂದ ಈ ಒಂದು ಆಘಾತ ಭಾರತಿಯವರಿಗೆ ತಡೆಯಲಾರದ ಆಘಾತವಾಗಿತ್ತು. ಆ ವರ್ಷಗಳಲ್ಲಿ ಸಾಂಪ್ರದಾಯಿಕ ತಮಿಳು ಸಮಾಜವು ಬ್ರಿಟಿಷರ ಆರ್ಥಿಕ ವಸಾಹತು ನೀತಿಯಿಂದ ಬದಲಾಗ ಹತ್ತಿತು. ಸುಬ್ರಮಣ್ಯಭಾರತಿಯವರ ತಂದೆ ಸ್ವಲ್ಪ ಹಣ ಸಂಪಾದಿಸಬೇಕೆಂದುಕೊಂಡು ಅವರ ಈ ಹೊಸ ಆರ್ಥಿಕ ವಸಾಹತು ನೀತಿ ಹಾಗೂ

ತಾಂತ್ರಿಕತೆಯನ್ನು ಸ್ವಾಗತಿಸಿದ್ದರು. ಆದರೆ ಆ ಆರ್ಥಿಕ ಉದ್ದೇಶದಲ್ಲಿ ಹಾಗೂ ವ್ಯಾಪಾರದಲ್ಲಿ ಯಶಸ್ಸನ್ನು ಗಳಿಸಲಾಗಲಿಲ್ಲ. ಈ ಒಂದು ಸೋಲಿನಿಂದಾಗಿ ಅವರು ನಿಧನರಾದರು. ಅವರು ಈ ಒಂದು ನೋವನ್ನು "ಆತ್ಮಚರಿತ್ರೆ" ಎಂಬ ಶೀರ್ಷಿಕೆಯ ಕವನದಲ್ಲಿ ವ್ಯಕ್ತಪಡಿಸಿದ್ದಾರೆ :

"ನಮ್ಮ ತಂದೆಯವರು ಕೆಟ್ಟ ಬಡತನದಿಂದ
ತುಂಬಾ ತೊಂದರೆಯಲ್ಲಿದ್ದರು
ಕೆಟ್ಟ ಜನಗಳಿಂದ ಹೂಡಲ್ಪಟ್ಟ ಪಿತೂರಿಯಿಂದ
ಅವರ ಮಹದೈಶ್ವರ್ಯವನ್ನೆಲ್ಲಾ ಕಳೆದುಕೊಂಡರು
ಈ ಮುಂಚೆ ಅವರನ್ನು ಪ್ರಶಂಸಿಸಿದ್ದ ಅವರ
ಗೆಳೆಯರೆಲ್ಲಾ ಈಗ ಅವರನ್ನು ತೊರೆದರು
ಐಶ್ವರ್ಯ ಇದ್ದಾಗ ನಮ್ಮ ಜೊತೆ ತಿಂದುಂಡ
ನೆಂಟರಿಷ್ಟರೂ ಸಹ ವ್ಯಕ್ತಿ ಎಲ್ಲವನ್ನೂ ಕಳಕೊಂಡಾಗ
ಗೌರವ ಕೊಡುತ್ತಾರೆಯೇ"

ಭಾರತಿಯವರು ಹಣವನ್ನು ಗೌರವಿಸುವಂತಹ ವ್ಯಕ್ತಿಗಳನ್ನು ದ್ವೇಷಿಸುವಂತಾದರು. ಸಮಾಜದಲ್ಲಿ ಬ್ರಾಹ್ಮಣರ ಕರ್ತವ್ಯ ಜನಗಳಿಗೆ ಧರ್ಮ, ಕಲೆಗಳನ್ನು ಬೋಧಿಸುವುದೇ ಹೊರತು ಹಣ, ಆಸ್ತಿ, ಅಂತಸ್ತುಗಳ ಬಗ್ಗೆ ಭ್ರಾಂತಿಯನ್ನುಂಟುಮಾಡುವುದಲ್ಲ ಎಂದು ಯೋಚಿಸಿ ಆ ಒಂದು ಭಾವನೆಯನ್ನು ಈ ಕೆಳಕಂಡ ಕವನದಲ್ಲಿ ವ್ಯಕ್ತಪಡಿಸಿದ್ದಾರೆ—

"ಇದು ಕಲಿಯುಗ ಹಾಗೂ
ಬ್ರಾಹ್ಮಣರು ನಾಶವಾಗಿದ್ದಾರೆ (ನಾಶವಾಗಲ್ಪಟ್ಟಿದ್ದಾರೆ)

ಹಣ ಸಂಪಾದನೆಯ ಕೆಲಸ
ಬೆವರು ಸುರಿಸುವ ಕೆಲಸವೆಂದು ಯೋಚಿಸಿದ್ದಾರೆ"

ಭಾರತಿಯವರು ಅವರ ತಂದೆಯವರ ಎದುರು ನಿಂತು ಮಾತನಾಡಲು ಹೆದರುತ್ತಿದ್ದರೂ ಸಹ ಅವರ ತಂದೆಗೆ ಇವರನ್ನು ಕಂಡರೆ ತುಂಬಾ ಇಷ್ಟ. ಹಾಗಾಗಿ ತಂದೆಯವರ ಸಾವು ಅವರ ಬಾಳಿನಲ್ಲಿ ಒಂದು ದೊಡ್ಡ ಹೊಡೆತ ಹಾಗೂ ಭರಿಸಲಾರದ ನಷ್ಟವಾಗಿತ್ತು. ಈ ಕೆಲವು ದುಃಖದ ಭಾವನೆಗಳನ್ನು ಈ ಕವನದಲ್ಲಿ ಹೀಗೆ ವ್ಯಕ್ತ ಪಡಿಸಿದ್ದಾರೆ :

ನನ್ನ ತಂದೆ ಹೋದರು
ಅಲ್ಲಿ ನನಗೆ ಸಮಾಧಾನ ಮಾಡುವವರು ಯಾರೂ ಇಲ್ಲವಾದರು
ನನಗೆ ಏನೂ ಗೊತ್ತಿರಲಿಲ್ಲ
ನಾನು ನಿಶ್ಶಕ್ತನಾದೆ
ನನಗೆ ಯೋಚಿಸುವ ಶಕ್ತಿ ಸಹ ಇರಲಿಲ್ಲ
ಸುಮಾರು ಹಣ ಸುರಿದು ಪಡೆದ ವಿದ್ಯಾಭ್ಯಾಸ
ಸಹ ಆ ಸಮಯದಲ್ಲಿ ಉಪಯೋಗಕ್ಕಿಲ್ಲದಂತಾಯಿತು
ನನಗೆ ಬೇರೆ ದಾರಿ ಇರಲಿಲ್ಲ
ಏನು ಮಾಡುವುದು ?
ಈ ದುಃಖಪೂರಿತ ಪ್ರಪಂಚದಲ್ಲಿ ನಾನು ಏತಕ್ಕೆ ಹುಟ್ಟಿದೆ ?

ಅವರ ತಂದೆಯ ಸಾವಿನ ನಂತರ ಭಾರತಿಯವರು ತಮ್ಮ ಹಳ್ಳಿಯಲ್ಲಿ ವೃಥಾ ಸೋಮಾರಿಯಾಗಿ ಕಾಲ ಕಳೆಯುತ್ತಿದ್ದರು. ಭಾರತಿಯವರ ತಂದೆಯವರ ಸಾವಿನ ಸುದ್ದಿ ತಿಳಿದ ಅವರ ಅತ್ತೆ ಭಾರತಿಯವರನ್ನು ತಮ್ಮ ಜೊತೆಯಲ್ಲಿರಿಸಿಕೊಳ್ಳಲು ಬನಾರಸ್‌ಗೆ ಕರೆದೊಯ್ದರು. ಅಲ್ಲಿ ಅವರು ಹಿಂದಿ ಮತ್ತು ಸಂಸ್ಕೃತವನ್ನು ಓದಿ

ಬನಾರಸ್ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಸಹ ಉತ್ತೀರ್ಣರಾದರು. ತಿರುನಲ್ವೇಲಿಯ ಪ್ರವೇಶ ಪರೀಕ್ಷೆಯಲ್ಲೇ ಉತ್ತೀರ್ಣರಾಗಲು ಸಾಧ್ಯವಿಲ್ಲವೆಂದುಕೊಂಡಿದ್ದ ಅವರು ಬನಾರಸ್ ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು.

ಅವರು ಬನಾರಸ್‌ಗೆ ಹೋದನಂತರ ಅವರ ಅತ್ತೆಯವರು ಹಣವಂತರೂ ಪ್ರಭಾವಿತರೂ ಆದರು. ಅವರ ಯಜಮಾನರೂ ಸಹ ಒಳ್ಳೆಯ ಜೀವನವನ್ನೇ ನಡೆಸುತ್ತಿದ್ದರು. ಆ ದಿನಗಳಲ್ಲಿ ಬನಾರಸ್‌ನಲ್ಲಿ ದಕ್ಷಿಣ ಭಾರತದಿಂದ ಹೋದ ಯಾತ್ರಿಕರಿಗೆ ಅಲ್ಲಿದ್ದು ಪೂಜಿಸಲು ಕೆಲವು ಸ್ಥಳಗಳು ಮಾತ್ರ ಇದ್ದವು. ಯಾತ್ರಿಕರ ಈ ಕಷ್ಟವನ್ನು ತಿಳಿದ ಭಾರತಿಯವರ ಮಾವನವರು ಅಲ್ಲಿ ೨ ಛತ್ರಗಳನ್ನು ಕಟ್ಟಿಸಿದರು. ಅವರ ಮಾವನವರೂ ಸಹ ಬನಾರಸ್‌ನಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದರು. ಆಗ ಅವರು ಬನಾರಸ್ ಮತ್ತು ಬನಾರಸ್‌ನಲ್ಲಿ ಗಂಗಾನದಿಯನ್ನು ಇಷ್ಟಪಡಲು ತೊಡಗಿದರು. ಅವರು ನದಿಯ ತೀರದಲ್ಲಿ ಕುಳಿತು ಪ್ರಕೃತಿಯನ್ನು ಸವಿಯುತ್ತಾ ಕವನಗಳನ್ನು ರಚಿಸುತ್ತಿದ್ದರು. ಹೀಗೆ ಒಟ್ಟಾರೆ ಭಾರತಿಯವರು ಒಬ್ಬ ವಿಭಿನ್ನ ವ್ಯಕ್ತಿಯಾಗಿದ್ದರು.

ಸಂಪ್ರದಾಯಗಳನ್ನನುಸರಿಸುವ ರೂಢಿಯಿಟ್ಟುಕೊಂಡಿದ್ದ ಭಾರತಿಯವರ ಮಾವನವರಿಗೆ ಭಾರತಿಯವರನ್ನು ಕಂಡರೆ ತುಂಬಾ ಸಿಟ್ಟು ಇತ್ತು. ಕಾರಣ ಭಾರತಿಯವರು ಎಲ್ಲಾ ಜಾತಿಯ ಹುಡುಗರೊಂದಿಗೆ ಬೆರೆಯುತ್ತಿದ್ದರು. ಭಾರತಿಯವರು ಪಾಶ್ಚಾತ್ಯ ಆಂಗ್ಲ ರೀತಿಯಲ್ಲಿ ವೇಷಭೂಷಣಗಳನ್ನು ತೊಡಲು ಇಷ್ಟಪಡುತ್ತಿದ್ದರು. ಈ ನಡತೆ ಅವರ ಮಾವನವರಿಗೆ ಇನ್ನೂ ಸಿಟ್ಟು ತರಿಸಿತು. ಇದನ್ನೆಲ್ಲಾ ತಿಳಿದಿದ್ದರೂ ಅವರ ಅತ್ತೆ ಮಾತ್ರ ಭಾರತಿಯವರನ್ನು ತುಂಬಾ ಇಷ್ಟಪಡುತ್ತಿದ್ದರು. ಅವರ ಮಾವನವರು ರೋಗಿಯಾಗಿದ್ದು ಅದು ಭಾರತಿಯವರಿಗೆ ತಿಳಿಯುವುದು ಇಷ್ಟವಿರಲಿಲ್ಲ.

ಒಂದು ದಿನ ಭಾರತಿಯವರು ತಮ್ಮ ಮೀಸೆ, ಜುಟ್ಟುಗಳನ್ನು ತೆಗೆಸಿಕೊಂಡು ಅವರ ಮಾವನವರ ಮುಂದೆ ಬಂದರು. ಭಾರತಿಯವರು ಎದುರು ಬರುವುದನ್ನೂ ಇಷ್ಟಪಡದೆ ಅಸಂತೋಷಪಟ್ಟರು ಅವರ ಮಾವ. ಕಾರಣ ಭಾರತಿಯವರು ಈಗ ಶುದ್ಧ ದಕ್ಷಿಣ ಭಾರತದ ಬ್ರಾಹ್ಮಣ ಹುಡುಗನಂತೆ ಕಾಣದೆ ಒಳ್ಳೆ ಪ್ರಾಯದ ಬೆಂಗಾಲಿ ಹುಡುಗನಂತೆ ಕಾಣುತ್ತಿದ್ದರು. ಈಗಂತೂ ಅವರ ಮಾವನವರಿಗೆ ಭಾರತಿಯವರ ಬರುವನ್ನು ಇಷ್ಟಪಡುವುದಿರಲಿ ಅವರ ಶಬ್ದ ಕೇಳಲೂ ಸಹ ಕೋಪಿಸಿಕೊಳ್ಳುತ್ತಿದ್ದರು. ಒಂದು ದಿನ ಅವರಿಗೆ ಕೋಪ ಬಂದು ಹೀಗೆ ಬೈದರು–"ನಾವು ಶೈವ ವಂಶಸ್ಥರು. ಶೈವ ವಂಶಸ್ಥರಿಂದ ಗೌರವಿಸಲ್ಪಟ್ಟ ವಂಶ ನಮ್ಮದು. ನಿನ್ನ ನಿಲುವುಗಳನ್ನು ನೋಡಿದರೆ ಒಂದು ರೀತಿ ಅಸಮರ್ಪಕವಾಗಿದೆ. ಇಂಥ ಸಮಯದಲ್ಲಿ ನಿಮ್ಮ ತಂದೆ ಇದ್ದಿದ್ದರೆ ಇದನ್ನೆಲ್ಲಾ ನೋಡಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರಷ್ಟೆ. ಈ ಹೊತ್ತಿನಿಂದ ನೀನು ನಮ್ಮ ಜೊತೆ ಕೂಡುವುದೂ ತಿನ್ನುವುದೂ ಬೇಡ. ಯಾವೊತ್ತು ನೀನು ನಿನ್ನ ಮೀಸೆ, ಜುಟ್ಟಿನೊಂದಿಗೆ ಮೊದಲಿನ ಹಾಗೆಯೇ ಬರುತ್ತೀಯೋ ಅವೊತ್ತು ಮಾತ್ರ ನಮ್ಮ ಜೊತೆಗೆ ನಿನಗೆ ಸ್ವಾಗತ" ಎಂದರು.

ಆಗ ಭಾರತಿಯವರೂ ಸಹ ಕೋಪಿಸಿಕೊಂಡು ಆಹಾರವನ್ನು ತೆಗೆದುಕೊಳ್ಳದೆ ಮಹಡಿಯ ಮೇಲೆ ಕಾಲ ಕಳೆಯುತ್ತಿದ್ದರು. ಆದರೆ ಅವರ ಅತ್ತೆಯವರು ಆಹಾರವನ್ನು (ತಮ್ಮ ತಂದೆಯ ತಂಗಿ) ಮಹಡಿಗೇ ತೆಗೆದುಕೊಂಡು ಹೋಗಿ ಕೊಡುತ್ತಿದ್ದರು.

ಭಾರತಿಯವರ ತಮಿಳಿನ ಜ್ಞಾನವನ್ನು ತಿಳಿಯಲು ಅವರ ಮಾವನವರಿಗೆ ಒಂದೆರಡು ತಿಂಗಳು ಕಳೆದ ನಂತರ ಒಂದು ಸುಸಂದರ್ಭ ಒದಗಿ ಬಂತು. ಮಾರ್ಗಶಿರ ತಿಂಗಳಲ್ಲಿ ಅವರ ಛತ್ರಗಳಲ್ಲಿ ಒಂದಾದ ದೇವಸ್ಥಾನದಲ್ಲಿ ನೂರಾರು ಜನ ಸೇರಿರುವ ಒಂದು ಕಾರ್ಯಕ್ರಮ ಇತ್ತು. ತಿರುವೆಂಬಾವೈ ಕಾವ್ಯವಾಚನ ಮಾಡಲು ಒಪ್ಪಿಕೊಂಡಿದ್ದ

ವ್ಯಕ್ತಿ ಅಂದು ಗೈರುಹಾಜರಾಗಿದ್ದರು. ಅದಕ್ಕಾಗಿ ಮೀಸಲಿಟ್ಟಿದ್ದ ಸಮಯ ಕಳೆದ ನಂತರ ಸುಮಾರು ಹೊತ್ತು ಕಾದ ಭಾರತಿಯವರ ಮಾವನವರಿಗೆ ಏನೂ ತೋಚದೆ ಅವರ ಧರ್ಮಪತ್ನಿಯ ಬಳಿ ಹೇಳಿದರು. ಭಾರತಿ ಸಹ ಆ ಕಾವ್ಯವಾಚನದ ಜ್ಞಾನ, ಸಾಮರ್ಥ್ಯವುಳ್ಳಂತಹ ವ್ಯಕ್ತಿ ಎಂದು ಅವರ ಪತಿಗೆ ತಿಳಿಸಿದರು. ಅವರ ತಲೆಯಲ್ಲಿ ಆ ವಾಚನದ ಬಗ್ಗೆ ತುಂಬಿಹೋಗಿತ್ತು. ಅವರ ಮಾವನವರು ಬಂದು ಕೇಳಿದಾಗ ಸರಾಗವಾಗಿ, ತುಂಬಾ ಸುಂದರವಾಗಿ ಅಲ್ಲಿ ಸೇರಿದ್ದ ಜನಗಳೆಲ್ಲರಿಗೂ ತೃಪ್ತಿಯಾಗುವಂತೆ ತಿರುವೆಂಬಾವೈ ಕಾವ್ಯವನ್ನು ವಾಚಿಸಿದರು. ಭಾರತಿಯವರು ವಾಚಿಸಿದ ಶೈಲಿ, ರಾಗ, ಧ್ವನಿ ಮೋಹಕವಾಗಿತ್ತು. ಅವರ ಪರಿಣತಿಯನ್ನು ಕಂಡು ಜನ ಭಾರತಿಯವರನ್ನು ಸುತ್ತುವರಿದು ಹೊಗಳಿ ಪ್ರಶಂಸಿಸತೊಡಗಿದರು.

ಅಂದು ಭಾರತಿಯವರ ಮಾವನವರ ಮನಸ್ಸು ಪರಿವರ್ತನೆ ಹೊಂದಿ ಅವರನ್ನು ಹೀಗೆ ಹೊಗಳಿದರು–"ನಾವೆಲ್ಲ ಸಂಪ್ರದಾಯ ರೂಢಿಗಳನ್ನುಳ್ಳ ಬ್ರಾಹ್ಮಣರು. ಈ ವಿಭೂತಿ, ಮೀಸೆ, ಜುಟ್ಟು ಇಂತಹ ಬಾಹ್ಯಲಕ್ಷಣಗಳು ನಮಗೆ ಅನಿವಾರ್ಯ. ಆದರೆ ನಿನ್ನಂತಹವನಿಗೆ ಇವೆಲ್ಲ ಅಪ್ರಯೋಜಕವಾದಂತಹವು" ಎಂದು. ಅಂದಿನಿಂದ ಅವರೊಂದಿಗೆ ಆಹಾರ ಭಾರತಿಯವರಿಗೂ ಕೊಡಲ್ಪಡುತ್ತಿತ್ತು.

ಭಾರತಿಯವರು ಸದಾ ಸ್ವಚ್ಛ ಹಾಗೂ ಒಳ್ಳೆಯ ಬಟ್ಟೆಗಳನ್ನು ಧರಿಸುತ್ತಿದ್ದರು. ಅವರ ಬಳಿ ಹಣ ಇಲ್ಲದಿದ್ದರೂ ಸಹ ಅವುಗಳನ್ನೇ ಇಷ್ಟಪಡುತ್ತಿದ್ದರು. ಈ ವಿಷಯ ಹೇಗೆ ವ್ಯಕ್ತವಾಗಿದೆಯೆಂದರೆ ಅವರ ಸಾವಿಗೂ ಸ್ವಲ್ಪಹೊತ್ತಿನ ಮುಂಚೆ ಬುಷ್‌ಕೋಟು (ನಿಲುವಂಗಿ) ಉತ್ತಮ ಜರತಾರಿ ಪೇಟವನ್ನು ಧರಿಸಿದ್ದಂತಹುದನ್ನು ಅನೇಕರು ನೋಡಿದವರಿದ್ದಾರೆ.

ಭಾರತಿಯವರು ಬನಾರಸ್‌ನಲ್ಲಿ ಓದುತ್ತಿದ್ದಾಗ ಎಟ್ಟಾಯಪುರಂನ ರಾಜರು ತಮ್ಮ ಕಾರ್ಯನಿಮಿತ್ತ ದೆಹಲಿಗೆ ಹೋಗಿ ಹಿಂದಿರುಗು

ವಾಗ ಬನಾರಸ್‌ಗೆ ಭೇಟಿ ಕೊಡಲು ಹೋದರು. ಅಲ್ಲಿ ಅವರು ಭಾರತಿಯವರನ್ನು ಕಂಡರು. ಕಂಡು ಎಟ್ಟಾಯಪುರಂಗೆ ಹಿಂತಿರುಗಿ ಬರಲು ಕೇಳಿದರು. ಆಗ ಭಾರತಿಯವರು ನಾನು ಯಾರ ಹಂಗಿನಲ್ಲೂ ಇದ್ದು ಕೆಲಸ ಮಾಡಲು ಇಷ್ಟಪಡುವುದಿಲ್ಲವೆಂದರು. ಆಗ ರಾಜರು ಭಾರತಿಯವರಿಗೆ ತಮಗೆ ಇಷ್ಟಬಂದ ಹಾಗೆ ಇರಲು ಅವಕಾಶ ಮಾಡಿ ಕೊಡುವುದಾಗಿ ಭಾಷೆಕೊಟ್ಟಿದ್ದರಿಂದ ಆ ನಂಬಿಕೆಯಿಂದ ಎಟ್ಟಾಯಪುರಂಗೆ ಬಂದು ೧೮೯೧ರಲ್ಲಿ ಉಪನಯನ, ೧೮೯೭ರಲ್ಲಿ ಮದುವೆವರೆಗೂ ಇದ್ದರು. ಚೆಲ್ಲಮ್ಮ ಭಾರತಿಯವರಿಂದಾಗಿ ಸ್ವಲ್ಪ ದಿವಸಗಳ ನಂತರ ಎಟ್ಟಾಯಪುರಂ ಬಿಟ್ಟು ಮತ್ತೆ ಹೋಗಬೇಕಾಗಿ ಬಂತು. ಆ ಒಂದು ಸಂದರ್ಭ ತಮ್ಮ ಪತ್ನಿ ಯಿಂದಲೇ ಒದಗಿಬಂತು. ಭಾರತಿಯವರು ಒಂದು ಪಂಜರದ ಪಕ್ಷಿಯ ಹಾಗೆ ಇರಲು ಇಷ್ಟಪಡಲಿಲ್ಲ. ಆದ್ದರಿಂದ ಆ ಕೆಲವು ಭಾವನೆಗಳನ್ನು ಒಂದು ಕವನದಲ್ಲಿ ವ್ಯಕ್ತಪಡಿಸಿ ಅದನ್ನು ತಮ್ಮ ಗೆಳೆಯರ ಮುಂದೆ ಓದಿದರು. ಭಾರತಿಯರ ಬಗ್ಗೆ ಅಸೂಯೆ ಇದ್ದ ಕೆಲವು ಗೆಳೆಯರು ರಾಜರ ಬಳಿ ಹೋಗಿ ಭಾರತಿಯವರು ತಮಗೆ ಸಂಬಂಧಿಸಿದ ಹಾಗೆ ಕವನಗಳನ್ನು ಬರೆದಿದ್ದಾರೆಂದು ತಿಳಿಸಿದರು. ಇದರಿಂದ ಮಹಾರಾಜರು ಕೋಪಗೊಂಡರು. ಇದೇ ಒಂದು ನೆಪವನ್ನಾಗಿ ಮಾಡಿಕೊಂಡು ಭಾರತಿ ಎಟ್ಟಾಯಪುರಂನ್ನು ತೊರೆದರು. ಎಟ್ಟಾಯಪುರಂನಲ್ಲಿದ್ದಾಗ ಭಾರತಿಯವರು ಕೆಲವು ಆಂಗ್ಲ ಮತ್ತು ತಮಿಳು ಪುಸ್ತಕಗಳನ್ನು ಓದಿ ಸಾರವನ್ನು ಹೇಳುತ್ತಿದ್ದರು. ಆ ದಿನಗಳಲ್ಲಿ ಭಾರತಿಯವರು ಬೈರನ್ ಮತ್ತು ಶೆಲ್ಲಿಯವರ ಕವನಗಳನ್ನು ಇಷ್ಟಪಡುತ್ತಿದ್ದರು. ಶೆಲ್ಲಿಯವರ ಕವನಗಳಿಂದ ಪ್ರಭಾವಿತರಾಗಿ ಆಕರ್ಷಿತರಾಗಿ ತಮ್ಮನ್ನು ತಾವೇ ಶೆಲ್ಲಿದಾಸನ್ (ಶೆಲ್ಲಿ ಕವಿಯ ಶಿಷ್ಯ) ಎಂದು ಕರೆದು ಕೊಂಡರು.

ಭಾರತಿಯವರು ತರ್ಕಶಾಸ್ತ್ರದಲ್ಲಿ ಪರಿಣತರಾಗಿದ್ದು, ನಾಸ್ತಿಕ ವಾದವನ್ನು ಪಕ್ಕಿಗೆ ಒಪ್ಪುತ್ತಿದ್ದರು. ಹಾಗೂ ನಾಸ್ತಿಕ ವಾದದ ಚಿಂತನೆಯ ಬಗ್ಗೆ ಪುಸ್ತಕಗಳನ್ನು ಓದುತ್ತಿದ್ದರು.

ಅವರು ಬನಾರಸ್‌ನಲ್ಲಿ ತಂಗಿದ್ದಾಗ ತಮ್ಮನ್ನು ತಾವು ತ್ಯಾಗ ಮಾಡಿಕೊಳ್ಳುವಂತಹ ಪರಿಸ್ಥಿತಿಯಲ್ಲಿ ತೊಡಗಿದ್ದನ್ನು ತಿಳಿಸಲು ಕೆಲವು ಆಧಾರಗಳು ದೊರೆತವು. ಅದೆಂದರೆ ರಾಷ್ಟ್ರೀಯ ಸ್ವತಂತ್ರ ಸಂಗ್ರಾಮ ದಲ್ಲಿ ಪಾಲ್ಗೊಳ್ಳುವುದು. ಭಾರತದ ಸ್ವತಂತ್ರ ಸಂಗ್ರಾಮದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ದೇಶಕ್ಕಾಗಿ ತಮ್ಮ ಕೈಲಾದಷ್ಟು ಸೇವೆ ಸಲ್ಲಿಸಲು ಮನಸ್ಸು ಮಾಡಿರುವಂತಹ ಆಘಾತದ ಸುದ್ದಿಯನ್ನು ಭಾರತಿಯವರ ಪತ್ನಿಯ ಸಂಬಂಧಿಕರೊಬ್ಬರು ಬಂದು ಭಾರತಿಯವರ ಪತ್ನಿಗೆ ತಿಳಿಸಿ ಭಾರತಿಯವರಿಗೆ ಬುದ್ಧಿ ಹೇಳಲು ತಿಳಿಸಿ ಭಾರತಿ ಯವರನ್ನು ಇತರ ವಿದ್ಯಾವಂತ ಜನರಂತೆ ಬಾಳಲು ತಿಳಿಸಲ್ಲ ಹೇಳಿದರು.

೧೯೦೪ರಲ್ಲಿ ಭಾರತಿಯವರು ಎಟ್ಟಾಯಪುರಂ ಸಂಸ್ಥಾನವನ್ನು ಬಿಟ್ಟು ಮಧುರೈಗೆ ಹೋದರು. ಮಧುರೈನಲ್ಲಿ "ಸೇತುಪತಿ" ಎಂಬ ಪ್ರೌಢಶಾಲೆ ಇತ್ತು. ಆದರೂ ಈ ಮುಂಚೆ ಎಟ್ಟಾಯಪುರಂ ನಲ್ಲಿದ್ದಾಗಲೂ ಸಹ ಕವನಗಳನ್ನು ಬರೆದು ಪ್ರಕಟಿಸುತ್ತಿದ್ದರು. ಅವರು ಮೊದಲ ಕವನವನ್ನು ಬರೆದು "ವಿವೇಕಭಾನು" ಎಂಬ ಪತ್ರಿಕೆ ಯಲ್ಲಿ ಪ್ರಕಟಿಸಿದರು. ಆ ತಮಿಳು ಪದ್ಯದ ಶೀರ್ಷಿಕೆ "ತನಿಮಯಿರ್ ಇರಕ್ಕವಲ್". ಈ ಕವನ ಏಕಾಂಗಿ ವ್ಯಕ್ತಿಯೊಬ್ಬನಿಗಾದ ತನ್ನ ಒಲುಮೆಯ ನಲ್ಲೆಯ ಪ್ರೀತಿಯ ನೆನಪುಗಳ ನೋವನ್ನು ವ್ಯಕ್ತಪಡಿಸುತ್ತದೆ:

"ಅವಳೊಂದಿಗೆ ಕಳೆದ ಆ ದಿನಗಳನ್ನು
ನಾನು ಯೋಚಿಸುತ್ತಿದ್ದೆ
ಆ ಯೋಚನೆಗಳು ನನಗಿಂದು ಬಂದವು
ವಿಧಿ ನನ್ನನ್ನು ಅವಳೊಂದಿಗೆ ಆಡಿಸಿದ ಆಟ
ಅಷ್ಟೊಂದು ಅಮಾನುಷವಾಗಿತ್ತು
ಸಮುದ್ರದಲ್ಲಿ ದೀಪದ ಮನೆಯನ್ನು

ಕಾಣದ ಹಡಗು ಹಂಬಲಿಸಿದ ಹಾಗೆ ಕೊರಗಿದೆ
ಅವಳೊಂದಿಗೆ ನಾನಿದ್ದ ಆ ಕ್ಷಣಗಳು
ಅಷ್ಟು ತ್ವರಿತಗತಿಯಲ್ಲಿ ಹೋದವು
ಈಗ ಅದು ಪರ್ವತದ ಹಾಗೆ ಬಿದ್ದಿದೆ
ಚಲಿಸದೆ ಮಂದವಾಗಿ
ಯಾಕೆಂದರೆ ಈಗ ನಾನು ಅವಳಿಂದ
ದೂರವಾಗಲ್ಪಟ್ಟಿದ್ದೇನೆ! ಓ ಶಿವಾ!!"

ಮಧುರೈನ ಸೇತುಪತಿ ಪ್ರೌಢಶಾಲೆಯಲ್ಲಿ ಕೇವಲ ೩ ತಿಂಗಳು ಪಂಡಿತರಾಗಿ ಸೇವೆ ಸಲ್ಲಿಸಿದರು. ನಂತರ ಮಧುರೈಯಿಂದ ಮದ್ರಾಸ್‌ಗೆ ಹೋಗಿ ಸುಬ್ರಮಣ್ಯಅಯ್ಯರ್ ಅವರಿಂದ ಸಂಚಾಲಿತದಲ್ಲಿದ್ದ "ಸ್ವದೇಶ ಮಿತ್ರನ್" ಎಂಬ ವೃತ್ತಪತ್ರಿಕೆ ಸೇರಿಕೊಂಡರು. ಶುದ್ಧಾನಂದ ಭಾರತಿಯಾರ್ (ಭಾರತಿಯವರ ಜೀವನ ಚರಿತ್ರೆಯನ್ನು ಬರೆದವರು) ರವರ ಪ್ರಕಾರ ಸ್ವಂತ ಸ್ಥಳದ ತಮಿಳಿನ ಕಾಲೇಜಿನ ಪಂಡಿತರಾದ ಗೋಪಾಲಕೃಷ್ಣ ಅಯ್ಯರ್ ಭಾರತಿಯವರು 'ಸ್ವದೇಶ ಮಿತ್ರನ್' ಸೇರಲು ಕಾರಣರಾದರು. ಹೀಗೆ 'ಸ್ವದೇಶ ಮಿತ್ರನ್' ಪತ್ರಿಕೆಯ ಯಜಮಾನರ ಜೊತೆ ಸ್ನೇಹ ಬೆಳೆಯಿತು.

೧೯೦೪ರ ನವೆಂಬರ್ ತಿಂಗಳಿನಲ್ಲಿ 'ಸ್ವದೇಶ ಮಿತ್ರನ್' ಪತ್ರಿಕೆಗೆ ಸೇರಿಕೊಂಡರೂ ಸಹ ೨ ವರ್ಷಗಳಿಗೂ ಮೇಲ್ಪಟ್ಟು ಅಲ್ಲಿ ಸೇವೆ ಸಲ್ಲಿಸಲಾಗಲಿಲ್ಲ. 'ಸ್ವದೇಶ ಮಿತ್ರನ್' ಪತ್ರಿಕೆಯಲ್ಲಿ ಹಲವಾರು ಕವನ ಗಳನ್ನು ಬರೆದರು. ೧೯೦೫ ಸೆಪ್ಟೆಂಬರ್ ೧೪ರಂದು ಮರೀನಾ ಸಮುದ್ರ ತೀರದ ಬಗ್ಗೆ ಒಂದು ಸಭೆ ಇತ್ತು. ಆ ಸಭೆಯಲ್ಲಿ ಬಂಗಾಳ ಮತ್ತು ಬಂಗಾಳದ ಜನರನ್ನು ಹೊಗಳಿ ಬರೆದ ಒಂದು ಕವನವನ್ನು ವಾಚಿಸಿದರು. ಆ ಕವನ ಮಾರುದಿನವೇ 'ಸ್ವದೇಶ ಮಿತ್ರನ್' ಪತ್ರಿಕೆ ಯಲ್ಲಿ ಪ್ರಕಟವಾಗಿತ್ತು.

ಆ ಒಂದು ಕವನದ ಅರ್ಥ ಹೀಗಿದೆ:

"ನಮ್ಮ ಭಾರತ ದೇಶ
ಕಲ್ಪವೃಕ್ಷವಿದ್ದಂತೆ
ಅದು ಎಲ್ಲರ ಇಚ್ಛೆಯನ್ನೂ ಪೂರೈಸುತ್ತದೆ
ಪಾಶ್ಚಾತ್ಯರು ಕೊಟ್ಟಂತಹುದನ್ನು ನಾವು
ಏನನ್ನೂ ಪಡೆಯಲಿಲ್ಲ
ಇದು ಬಂಗಾಳದವರಿಂದ ಸೂಚಿತವಾಯಿತು
ಓ! ಬಂಗಾಳ ತಾಯಿ ನಾವು ನಿನ್ನನ್ನು ಪ್ರಶಂಸಿಸುತ್ತೇವೆ
ನಿನ್ನ ಕಣ್ಣೀರನ್ನು ಅಳಿಸಿಹಾಕು ಬಂಗಾಳ ತಾಯೀ!
ದಯವಿಟ್ಟು ನಗೆದೋರು ಓ ದೇವಿ!
ನೀನು ನಿನ್ನ ಮಕ್ಕಳ ಕಷ್ಟಗಳನ್ನು ತೊಡೆದುಹಾಕುವೆ
ಒಬ್ಬ ಹೆಣ್ಣಾಗಿ ನೀನು ಸಂತೋಷವಾಗಿರು
ನಿನ್ನ ಮಕ್ಕಳು ಮಹಾನ್ ವ್ಯಕ್ತಿಗಳಾಗುವುದನ್ನು ನೋಡಲು
ಓ ಬಂಗಾಳ ತಾಯಿ! ನಾನು ನಿನ್ನನ್ನು ಪ್ರಶಂಸಿಸುತ್ತೇನೆ"

ಭಾರತಿಯವರು 'ಚಕ್ರವರ್ತಿನಿ' ಎಂಬ ಮತ್ತೊಂದು ಮಾಸಿಕ ಪತ್ರಿಕೆಯ ಒಡೆಯರಾದರು. ಆ ಅವಧಿಯಲ್ಲಿ ತೂತುಕುಡಿಯ ಸ್ವಾತಂತ್ರ್ಯ ಹೋರಾಟಗಾರರಾದ ವಿ. ಓ. ಚಿದಂಬರಂಪಿಳ್ಳೈ ಎಂಬುವವರ ಮಿತ್ರರಾದರು. ನಂತರ ಪಿಳ್ಳೈಯವರು ಬ್ರಿಟಿಷರ ಬಯಕೆಗಳಿಗೆ ಕಡಿವಾಣ ಹಾಕುವಂತೆ ಅವರ ಆಸೆಗಳ ವಿರುದ್ಧವಾಗಿ ಸ್ವಲ್ಪ ಗತ್ತಿನಿಂದ ಹೋರಾಡುವಂತಹ ಉತ್ತಮ ಸ್ವಾತಂತ್ರ್ಯ ಹೋರಾಟಗಾರರಾದರು.

೧೯೦೬ರಲ್ಲಿ ಭಾರತಿಯವರು ಕಲ್ಕತ್ತದಲ್ಲಿ ನಡೆದ ಕಾಂಗ್ರೆಸ್ಸಿನ ಸಭೆಯಲ್ಲಿ ಪಾತ್ರವಹಿಸಿದರು. ಆ ವೇಳೆಯಲ್ಲಿ ದಾದಾಬಾಯಿ ನವರೋಜಿಯವರು ಅಧ್ಯಕ್ಷರಾಗಿದ್ದರು. ಅದೇ ಸಮಯದಲ್ಲಿ ಭಾರತಿ

ಯುವರು ವಿವೇಕಾನಂದರ ಶಿಷ್ಯರಾದ ಸೋದರಿ ನಿವೇದಿತಾ ದೇವಿ ಯುವರನ್ನು ಭೇಟಿಮಾಡಲು ಹೋದರು. ಈ ಭೇಟಿಯ ಬಗ್ಗೆ ಚೆಲ್ಲಮ್ಮಾಳ್ ಭಾರತಿಯುವರ ಜೀವನ ಚರಿತ್ರೆಯಲ್ಲಿ ಹೇಳಿದ್ದಾರೆ. ಭಾರತಿಯುವರು ಸೋದರಿ ನಿವೇದಿತಾರವರನ್ನು ಭೇಟಿಮಾಡಿದಾಗ ಇವರೊಬ್ಬ ಯೂರೋಪಿಯನ್ ಮಹಿಳೆ ಎಂಬ ಅಲ್ಪಭಾವನೆ ತಮ್ಮ ಮನಸ್ಸಿನಲ್ಲಿತ್ತು. ಸೋದರಿ ನಿವೇದಿತಾರವರಿಗೂ ಇದು ತಿಳಿದಿದೆ ಎಂದುಕೊಂಡರು. ಆದ್ದರಿಂದ ಸೋದರಿ ನಿವೇದಿತಾರವರು ಭಾರತಿ ಯುವರಿಗೆ ಹೀಗೆ ಉಪದೇಶಿಸಿದರು. "ಬಣ್ಣ, ವರ್ಗ, ಅಂತಸ್ತು, ಮಾಡುವ ಕೆಲಸಗಳಿಂದ ಜನಗಳನ್ನು ಬೇರ್ಪಡಿಸುವ ಕೆಲಸ ತಪ್ಪು" ಎಂದು ಹೇಳಿದರು. ಪ್ರತಿಯೊಬ್ಬರನ್ನೂ ಪ್ರೀತಿಯಿಂದ ಕಾಣುವಂತೆ ಉಪದೇಶಿಸಿ ಭಾರತೀಯುವರಿಗೆ ಮದುವೆಯಾಗಿದೆಯೆ ಎಂದು ಕೇಳಿ ಅವರು ಆಗಿದೆ ಎಂದಾಗ ಮತ್ತೆ ಯಾಕೆ ನೀನು ನಿನ್ನ ಹೆಂಡತಿಯನ್ನು ಈ ಕಾಂಗ್ರೆಸ್ ಸಭೆಗೆ ಕರೆತರಲಿಲ್ಲ ಎಂದಾಗ ಭಾರತಿ ಯುವರು ಹೇಳಿದರು 'ಹೆಂಗಸರನ್ನು ಸಾರ್ವಜನಿಕ ಚಟುವಟಿಕೆಗಳಿಗೆ ಕರೆತರುವುದು ನಮ್ಮ ಭಾರತದ ಸಂಪ್ರದಾಯಗಳಲ್ಲಿ ಇಲ್ಲ' ಎಂದು. ಆಗ ನಿವೇದಿತಾರವರು 'ಇದು ತಪ್ಪು' ಎಂದು ಹೇಳಿದರು. ಭಾರತಿ ಯುವರ ತಪ್ಪನ್ನು ಗುರುತಿಸಿದರು. ಹಾಗೂ ಎಲ್ಲಾ ರೀತಿಯಲ್ಲೂ ಹೆಂಗಸರೂ ಸಹ ಗಂಡಸರಷ್ಟೇ ಸಮಾನರು ಎಂದು ಮನದಟ್ಟು ಮಾಡಿಸಿದರು. ಈ ಒಂದು ಘಟನೆ ಭಾರತಿಯುವರ ಜೀವನ ಮತ್ತು ಕೆಲಸಗಳಲ್ಲಿ ಒಂದು ಗಾಢ ಪ್ರಭಾವ ಬೀರಿತು. ಅಂದಿನಿಂದ ತಮ್ಮ ಸಾವಿನಂಚಿನವರೆಗೆ ಭಾರತಿಯುವರು ನಿವೇದಿತಾರ ಬಗ್ಗೆ ಒಂದು ರೀತಿಯ ಸದ್ಭಾವನೆಯನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡರು. ಭಾರತಿ ಯುವರಿಗೆ ನಿವೇದಿತಾರವರು ಹಿಮಾಲಯದಿಂದ ತಂದಿದ್ದ ಒಂದು ಎಲೆಯನ್ನು ಕೊಟ್ಟರು. ಅಂದಿನಿಂದ ಭಾರತಿಯುವರು ನಿವೇದಿತಾ ರವರನ್ನು ತಮ್ಮ ಗುರು ಎಂದು ಸ್ವೀಕರಿಸಿದರು.

'ಸ್ವದೇಶ ಮಿತ್ರನ್' ಬಿಟ್ಟ ನಂತರ ಭಾರತಿಯವರು "ಇಂಡಿಯಾ" ಎಂಬ ಕ್ರಾಂತಿಕಾರೀ ವಾರಪತ್ರಿಕೆಗೆ ಸೇರಿಕೊಂಡರು. ಆ ವರ್ಷಗಳಲ್ಲಿ ಜನರಿಗೆ ಆಂಗ್ಲಭಾಷೆ ಹಾಗೂ ಆ ಸಂಸ್ಕೃತಿಗಳ ಬಗ್ಗೆ ತುಂಬಾ ಒಲವಿತ್ತು. ಆದಕಾರಣ ಭಾರತಿಯವರ ಹಲವು ಸ್ನೇಹಿತರು "ಇಂಡಿಯಾ" ಎಂಬ ವಾರಪತ್ರಿಕೆಯ ಮೂಲಕ ಬಂಗಾಳದ ವಿಭಜನೆಯ ವಿರುದ್ಧ ಹಾಗೂ ಸ್ವರಾಜ್ಯದ ಬಗೆಗಿನ ಕಲ್ಪನೆಯನ್ನು ತಮಿಳುನಾಡಿನಲಿ ಮತ್ತಷ್ಟು ಪಸರಿಸಿದರು. ಅದರಲ್ಲೂ ಭಾರತಿಯವರ ಲಿಖಿತ ರೂಪಗಳು ತಮಿಳುನಾಡಿನಲ್ಲಿ ಜನಮನ ತೆರೆಯುವಲ್ಲಿ ಯಶಸ್ವೀ ಪಾತ್ರ ವಹಿಸಿದವು. "ಬಾಲ ಭಾರತಂ" ಎಂಬ ಆಂಗ್ಲ ಪತ್ರಿಕೆಯ ಮೇಲ್ವಿಚಾರಣೆ ವಹಿಸಿದ್ದ ಭಾರತಿಯವರು ತಮಿಳುನಾಡಿನ ಹಲವಾರು ಸ್ವಾತಂತ್ರ್ಯ ಹೋರಾಟಗಾರರೊಂದಿಗೆ ಸಂಬಂಧ ಹೊಂದಿದ್ದರು. ಅವರಲ್ಲಿ ಪ್ರಮುಖರೆಂದರೆ ಮಂಡಾಯಂ ಶ್ರೀನಿವಾಸಚಾರಿಯಾರ್, ಧನರಾಯ್‌ಚಾಮಿ ಅಯ್ಯಂಗಾರ್ ಮತ್ತು ವ್ಯಾಪಾರಿ ಸಂಸ್ಥೆಯ ನಾಯಕರಾದ ಸರ್ಕರೈ ಚೆಟ್ಟಿಯಾರ್.

ಈ ಸಮಯದಲ್ಲಿ ಭಾರತಿಯವರು ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳತೊಡಗಿದರು. ಬಿಪಿನ್ ಚಂದ್ರಪಾಲ್ ಭಾರತಿಯವರ ನೆರವಿನಿಂದ ಮದ್ರಾಸಿನ ಜನರಲ್ಲಿ ಬ್ರಿಟೀಷರ ವಿರುದ್ಧ ಕ್ರಾಂತಿಕಾರಿ ಮನೋಭಾವ ಬೆಳೆಸಲು ಬಹಳವಾಗಿ ಪ್ರಯತ್ನಿಸಿದರು. ಇದರ ಫಲವೇ ಬಿಪಿನ್‌ರವರು ಮದ್ರಾಸನ್ನು ಬಿಟ್ಟ ನಂತರವೂ ಭಾರತಿಯವರು ಯತಿರಾಜ್, ಸುರೇಂದ್ರನಾಥ್ ಆರ್ಯ ಮತ್ತು ಸುಬ್ರಮಣ್ಯ ಅಯ್ಯರ್‌ರ ನೆರವಿನಿಂದ ಮದ್ರಾಸ್ ತೀರ ಪ್ರದೇಶದಲ್ಲಿ ಸತತವಾಗಿ ಸಭೆ ಸಮಾರಂಭಗಳ ಮೂಲಕ ಜನರಲ್ಲಿ ರಾಷ್ಟ್ರೀಯತೆಯನ್ನು ಬೆಳೆಸತೊಡಗಿದರು. ಸ್ವತಂತ್ರ ಹೋರಾಟಗಾರರಾದ ವಿ. ಓ. ಚಿದಂಬರಂ ಪಿಳ್ಳೈರವರು ತಮಿಳುನಾಡಿನಲ್ಲೊಂದು ಸ್ವದೇಶ ನೌಕಾ ಸಂಸ್ಥೆಯನ್ನು ಸ್ಥಾಪಿಸಬಯಸಿದರು. ಏಕೆಂದರೆ

ಶ್ರೀಲಂಕಾ–ಇಂಡಿಯಾಗಳ ನಡುವಿನ ವ್ಯಾಪಾರ, ವಾಣಿಜ್ಯ ತೂತುಕುಡಿಯ ಮೂಲಕ ಸಾಗುತ್ತಿತ್ತು. ಆದ್ದರಿಂದ ನೌಕಾ ಸಾಗಾಣಿಕೆಯೆಲ್ಲಾ ಬ್ರಿಟಿಷರ ಕೈವಶದಲ್ಲಿತ್ತು. ವಿ. ಓ. ಚಿದಂಬರಂ ಪಿಳ್ಳೈರವರು ಬ್ರಿಟಿಷರನ್ನು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಪ್ರತಿಸ್ಪರ್ಧಿಸಬೇಕೆಂದಿದ್ದರು. ಆದ್ದರಿಂದ ಪಿಳ್ಳೈರವರು "ಸ್ವದೇಶಿ ನ್ಯಾವಿಗೇಶನ್ ಕಂಪನಿ"ಯನ್ನು ಪ್ರಾರಂಭಿಸಿ ಲಾವಾ ಮತ್ತು ಕಾಲಿಯಾ ಎಂಬ ಎರಡು ಹಡಗುಗಳನ್ನು ಕೊಂಡರು. ತಮ್ಮ ಕಂಪನಿಗಳಿಗೆ ಹಣವನ್ನು ಚಲಾಯಿಸಬೇಕೆಂದುಕೊಂಡು ಮದ್ರಾಸ್‌ಗೆ ಹೋದರು. ಮದ್ರಾಸಿನಲ್ಲಿ ಪಿಳ್ಳೈರವರನ್ನು ಭಾರತಿಯವರು ಅನೇಕ ಸ್ವತಂತ್ರ ಸಂಗ್ರಾಮದ ಹೋರಾಟಗಾರರ ಬಳಿ ಹಾಗೂ ಹಣವಂತರ ಬಳಿ ಕೊಂಡೊಯ್ದರು. ಭಾರತಿಯವರು ಈ ರೀತಿ ಯೋಚಿಸಿದ್ದು ಪಿಳ್ಳೈರವರಿಗೆ ನೀಡಿದ ಪರಿಣಾಮಕಾರಿ ಪ್ರೋತ್ಸಾಹದ ಕೆಲಸ ಎಂದುಕೊಂಡರು, ಅವರ ಸ್ನೇಹಿತರು.

ಅದೇ ಸಮಯದಲ್ಲಿ ಒಂದು ವಾರ್ತೆ ಹೊರಬಿತ್ತು. ಅದೆಂದರೆ ಸೂರತ್ ಕಾಂಗ್ರೆಸ್ ಪಾರ್ಟಿಯು ಅದರ ನಂತರದ ಸಮಾವೇಶವನ್ನು ಕಾಣಲಿದೆ ಎಂಬುದು. ಅದು ೧೯೦೭ರಲ್ಲಿ ನಡೆದಾಗ ಕೆಲ ಯುವಕರು ಭಾರತಿಯವರ ಹಾಗೂ ಪಿಳ್ಳೈರವರ ನಾಯಕತ್ವದಲ್ಲಿ ಸೂರತ್‌ಗೆ ಹೊರಟರು. ಅಲ್ಲಿ ಬಾಲಗಂಗಾಧರತಿಲಕರ ಸಂಪೂರ್ಣವಾದ ಗುಂಪನ್ನು ಉದಾರ ಮನಸ್ಸಿನ ಕಾಂಗ್ರೆಸ್ ಜನರು ಹೊರದೂಡಿಸಿದರು. ಆ ಸಮಾವೇಶದಲ್ಲಿ ಬಿಕರಿರವರು ಮುಂದಗಾಮಿ ಕಾಂಗ್ರೆಸ್ ಜನಗಳ ನಾಯಕರಾಗಿದ್ದರು. ಅವರು ಆ ಸಮಾವೇಶದಲ್ಲಿ ಭಾಷಣ ಮಾಡಲು ನಿಂತಾಗ ಸುಮಾರು ವಿರೋಧಿಗಳು ಆ ಭಾಷಣವನ್ನು ಆಕ್ಷೇಪಿಸಿದರು. ಆಗ ಲೋಕಮಾನ್ಯ ತಿಲಕರು ಭಾಷಣ ಮಾಡಲು ನಿಂತರು. ಸ್ವಲ್ಪ ಜನ ಅವರನ್ನು ಭಾಷಣರಂಗದಿಂದ ಹೊರದೂಡಲು ಯತ್ನಿಸಿದರು. ತಕ್ಷಣವೇ ಕೆಲ ಯುವಜನರು ತಿಲಕರನ್ನು ಕಾಪಾಡಲು ನುಗ್ಗಿದರು.

ಅಲ್ಲಿ ತಿಲಕರ ಪರವಾಗಿ ಭಾರತಿಯವರು, ಚಿದಂಬರಂಪಿಳ್ಳೈಯವರೂ ಸಹ ಸೇರಿದ್ದರು.

ಸೂರತ್‌ನಿಂದ ಹಿಂದಿರುಗಿದ ತಕ್ಷಣ ಭಾರತಿಯವರು ಮಾಡಬೇಕಿದ್ದ ಕೆಲಸಗಳು ಬಹಳ ಇದ್ದವು. ಅವರು ಕಾಂಗ್ರೆಸ್ಸನ್ನು ತೀವ್ರಗಾಮಿ ಭಾಗವಾಗಿ ಮಾಡಲು ಪ್ರಯತ್ನಿಸಿದರು. ಆದರೆ ಮದ್ರಾಸಿನಲ್ಲಿ ಉದಾರವಾದ ಕಾಂಗ್ರೆಸ್ಸಿನ ಜನ ಸುಮಾರು ಇದ್ದರು. ಹಾಗಾಗಿ ಭಾರತಿಯವರು "ಚೆನ್ನೈ ಜನ ಸಂಘಂ" ಎಂಬ ಒಂದು ಸಂಘವನ್ನು ಪ್ರಾರಂಭಿಸಿದರು.

ತದನಂತರ ಒಬ್ಬ ಪತ್ರಿಕೋದ್ಯಮಿಯಾಗಿದ್ದ ಭಾರತಿಯವರು ಮಾಡಬೇಕಿದ್ದ ಕೆಲಸ ಮತ್ತೊಂದು ಇತ್ತು. ಅದೇನೆಂದರೆ ಅವರು ಸೂರತ್‌ನಲ್ಲಿದ್ದಾಗ ರಾಷ್ಟ್ರೀಯ ಮನೋಭಾವನೆ ಹೊಂದಿರುವ ಪತ್ರಿಕೋದ್ಯಮಿಗಳೆಲ್ಲ ಒಂದೆಡೆ ಸೇರಿ ಕ್ರಾಂತಿಕಾರೀ ರಾಷ್ಟ್ರೀಯ ಸಮರವನ್ನು ಹೂಡುವ ಆದೇಶವನ್ನು ಮಂಡಿಸಬೇಕೆಂಬುದು. ಈ ವಿಷಯದಲ್ಲಿ ಭಾರತಿಯವರು ದಕ್ಷಿಣ ಭಾರತದ ಹೊರೆ ಹೊತ್ತರು. ಹಾಗಾಗಿ ಸದಾ ಕೆಲಸಗಳಿಂದ ನಿರತರಾಗಿರುತ್ತಿದ್ದರು.

ಈ ಒಂದು ಸ್ವದೇಶಿ ಆರ್ಥಿಕ ನೀತಿಗೆ ರೂಪು ಕೊಡಲು ರಾಷ್ಟ್ರೀಯ ಮನೋಭಾವ ಹೊಂದಿರುವ ಜನಗಳು ಪಾಶ್ಚಾತ್ಯ ವಸ್ತುಗಳನ್ನು ತಿರಸ್ಕರಿಸಿದರು. ಹೀಗಾಗಿ "ಭಾರತ್ ಬಂದರ್" ಎಂಬ ಒಂದು ಅಂಗಡಿಯನ್ನು ಮದ್ರಾಸಿನಲ್ಲಿ ಪ್ರಾರಂಭಿಸಿದರು. ಈ ಒಂದು ಪರಿಣಾಮಕಾರಿ ಕೆಲಸದಲ್ಲಿ ಭಾರತಿಯವರ ಪಾತ್ರವೂ ಸಹ ಇತ್ತು.

ಭಾರತಾದ್ಯಂತ ೧೯೦೮ರಲ್ಲಿ ಒಂದು ದಿನ "ಸ್ವರಾಜ್ ದಿನ" ಎಂದು ತಿಳಿಸಲು ಚಳುವಳಿ ನಡೆಯಿತು. ಮದ್ರಾಸಿನ ನಾಯಕರೂ ಸಹ ಆ ಒಂದು ದಿನ ಯಶಸ್ಸು ಕಾಣಲೆಂದು ಆಶಿಸಿದರು. ಅದರ ಪ್ರಯುಕ್ತ ಮದ್ರಾಸಿನಲ್ಲಿ ಮತ್ತು ಮದ್ರಾಸಿನ ಸುತ್ತಮುತ್ತ ಅನೇಕ ಮೆರವಣಿಗೆಗಳು ಸಿದ್ಧಗೊಂಡವು. ಭಾರತಿಯವರು, ಅನೇಕ

ಜನಗಳು ಆ ಒಂದು ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಲು ಜನರನ್ನು ಎಚ್ಚರಿಸಲು ಅನೇಕ ಸ್ಥಳಗಳಿಗೆ ಹೋಗಿ ಭಾಷಣಗಳನ್ನು ಮಾಡಿದರು. ಆ ಕಾರ್ಯಕ್ರಮವನ್ನು ಮರೀನಾ ಬೀಚ್‌ನಲ್ಲಿ ಮುಕ್ತಾಯಗೊಳಿಸಲು ಮತ್ತೊಂದು ಬೃಹತ್ ಕಾರ್ಯಕ್ರಮ ಸಜ್ಜುಗೊಂಡಿತ್ತು.

ತೂತುಕುಡಿಯಲ್ಲಿ ಈ ಒಂದು ಸಂದರ್ಭದಲ್ಲಿ ಚಿದಂಬರಂ ರವರನ್ನು ರಾಜದ್ರೋಹದ ಆಪಾದನೆ ಮೇರೆಗೆ ಬಂಧಿಸಲಾಯಿತು. ಅದೇ ರೀತಿಯಲ್ಲಿ ಸುಬ್ರಮಣ್ಯ ಶಿವಾರವರ ಬಂಧನ ಸಹ ಆಯಿತು. ಆದ್ದರಿಂದ ಸುಬ್ರಮಣ್ಯಭಾರತಿಯವರನ್ನು ಪ್ರತ್ಯಕ್ಷ ಸಾಕ್ಷಿಯಾಗಿ ಬರಲು ಕೇಳಿದರು. ವಿ. ಓ. ಚಿದಂಬರಂ ಮತ್ತು ಸುಬ್ರಮಣ್ಯಶಿವಾ ಅವರನ್ನು ಕಾರಾಗೃಹದಲ್ಲಿಡಲಾಯಿತು.

ಚಿದಂಬರಂ ಪಿಳ್ಳೆ ಹಾಗೂ ಸುಬ್ರಮಣ್ಯ ಶಿವಾ ಇವರ ಬಗೆಗಿನ ಕಾರಾಗೃಹದ ಹೇಳಿಕೆ ಅನೇಕ ಜನರ ಭಾವನೆಗಳನ್ನು ಕೆರಳಿಸಿತು. ಭಾರತಿಯವರು "ಇಂಡಿಯಾ" ಪತ್ರಿಕೆಯನ್ನು ಜನರ ಮನಸ್ಸಿನಲ್ಲಿ ಬ್ರಿಟಿಷರ ವಿರುದ್ಧ ಭಾವನೆಗಳೇಳುವಂತೆ ಮಾಡಲು ಬಳಸಿದರು. ಇಂಡಿಯಾ ಪತ್ರಿಕೆಯ ವಿತರಣೆ ಸಹ ಹೆಚ್ಚಾಯಿತು. ತಮಿಳುನಾಡಿನ ಹಳ್ಳಿಗರೂ ಸಹ ಇಂಡಿಯಾ ಪತ್ರಿಕೆಯನ್ನು ಆ ದಿನಗಳಲ್ಲಿ ಒಪ್ಪಿಕೊಂಡು ಚಂದಾದಾರರಾದರು. ರಾಷ್ಟ್ರೀಯ ನಾಯಕರ ಬಗ್ಗೆ ಏನು ಸಣ್ಣಪುಟ್ಟ ಘಟನೆಗಳು ನಡೆದರೂ ಸಹ, ಚಿತ್ರಗಳು, ವಿವರಗಳ ಸಮೇತ ಆ ಪತ್ರಿಕೆಯಲ್ಲಿ ಬರುತ್ತಿದ್ದವು. ಈ ಪತ್ರಿಕೆ ತಮಿಳುನಾಡಿನ ರಾಷ್ಟ್ರೀಯ ನಾಯಕರ ಒಂದು ಮುಖ್ಯವಾದ ಅಂಗವಾಯಿತು.

ಈಗ ಸರ್ಕಾರದ ಕಣ್ಣು "ಇಂಡಿಯಾ" ಪತ್ರಿಕೆಯ ಮೇಲೆ ಬಿತ್ತು. ಇಂಡಿಯಾ ಪತ್ರಿಕೆಯ ಸಂಪಾದಕರನ್ನು ಬಂಧಿಸಿದ ವಿಷಯವನ್ನು ಸುಬ್ರಮಣ್ಯಭಾರತಿಯವರ ಬಗ್ಗೆ ಬರೆದ ಒಬ್ಬ ಇತಿಹಾಸಜ್ಞರು ತುಂಬಾ ಚೆನ್ನಾಗಿ, ನಾಟಕೀಯವಾಗಿ ವಿವರಿಸಿದ್ದಾರೆ.

ಒಂದು ದಿನ ಇಂಡಿಯಾ ಪತ್ರಿಕೆಯ ಕಟ್ಟಡದ ಮೇಲ್ಮಹಡಿ

ಯಿಂದ ಕೆಳಗಡೆಗೆ ಇಳಿದುಬರುತ್ತಿದ್ದ ಭಾರತಿಯವರಿಗೆ ಮೇಲ್ಮಹಡಿಗೆ ಹತ್ತುತ್ತಿದ್ದ ಬ್ರಿಟಿಷ್ ಪೋಲೀಸರೊಬ್ಬರು ಬಂಧನದ ವಾರಂಟ್ ಕೊಟ್ಟರು. ಆದರೆ ಭಾರತಿಯವರು ಆ ಬಂಧನವನ್ನು ತಿರಸ್ಕರಿಸಿದರು. ಕಾರಣ ಪತ್ರಿಕೆಯ ಸಂಪಾದಕರು ಅವರಾಗಿರದೆ ಬೇರೆಯವರಾಗಿದ್ದರು. ಅದು ಎಂ. ಶ್ರೀನಿವಾಸನ್ ಎಂಬುವವರ ಹೆಸರಿನಲ್ಲಿ ನೋಂದಾಯಿಸ ಲ್ಪಟ್ಟಿತ್ತು. ಆ ತಕ್ಷಣ ಶ್ರೀನಿವಾಸನ್‌ರವರನ್ನು ಬಂಧಿಸಲಾಯಿತು. ಭಾರತಿಯವರ ಜೊತೆಗಾರರು ಈ ಒಂದು ಉಪಾಯಕ್ಕೆ ತುಂಬಾ ದುಃಖ, ಬೇಸರಪಟ್ಟರು. ತದನಂತರ ಭಾರತಿಯವರನ್ನು ಸಹ ಬಂಧಿಸು ವರೆಂದು ಅವರು ಯೋಚಿಸಿದ್ದರು. ಭಾರತಿಯವರು ಮದ್ರಾಸನ್ನು ಬಿಟ್ಟು ಫ್ರೆಂಚ್ ಆಡಳಿತದಲ್ಲಿರುವ ಪಾಂಡಿಚೆರಿಗೆ ಹೋಗಬೇಕೆಂದು ಕೊಂಡರು. ಆದರೂ ಭಾರತಿಯವರು ಮದ್ರಾಸ್‌ನಲ್ಲೇ ಇದ್ದು ರಾಷ್ಟ್ರ ಕವಿಯ ಕರ್ತವ್ಯಗಳನ್ನು ಮಾಡಲು ಇಚ್ಛಿಸಿದರು. ಕವಿಯ ಸಂಗಾತಿಗಳೂ ಸಹ ಇದನ್ನೇ ಇಚ್ಛಿಸಿದರು. ಕಾರಣ ಅವರು ಮದ್ರಾಸಿನಲ್ಲಿ ಮಾಡಿದ ಕೆಲಸಗಳಿಗಿಂತ ಉತ್ತಮ ಕೆಲಸಗಳನ್ನು ಪಾಂಡಿಚೆರಿಯಲ್ಲಿ ಮಾಡಲು ಬಯಸಲಿಲ್ಲ.

ಭಾರತಿಯವರು ಎದುರಿಸಿದ ಮತ್ತೊಂದು ಸಮಸ್ಯೆ ಎಂದರೆ ಪಾಂಡಿಚೆರಿ ಅವರಿಗೆ ಪರಿಚಿತ ಸ್ಥಳವಾಗಿರಲಿಲ್ಲ. ಆದ್ದರಿಂದ ಮಂಡಾ ಯಮ್ ಶ್ರೀನಿವಾಸಾಚಾರಿಯಾರ್‌ರವರು ಭಾರತಿಯವರನ್ನು ಪರಿಚಯಿಸಿ ಪಾಂಡಿಚೆರಿಯ ಗೆಳೆಯರಾದಂತಹ ಕುಪ್ಪುಸ್ವಾಮಿ ಯವರಿಗೆ ಒಂದು ಪತ್ರವನ್ನು ಕೊಟ್ಟರು. ಕುಪ್ಪುಸ್ವಾಮಿಯವರು ಭಾರತಿಯವರನ್ನು ತಮ್ಮ ಮನೆಯಲ್ಲಿ ತಂಗಲು ಕೇಳಿದರು. ಭಾರತಿ ಯವರು ಪಾಂಡಿಚೆರಿಯಲ್ಲಿ ನೆಲೆಸಲು ಹೋದಾಗ ಅವರ ಪತ್ನಿಯನ್ನು ಅವರ ಭಾವನವರೇ ನೋಡಿಕೊಳ್ಳುತ್ತಿದ್ದರು. ಬ್ರಿಟಿಷ್ ಪೋಲೀಸ ರಿಂದಾದ ಬಂಧನವನ್ನು ತಡೆಯಲು ಅವರು ಪಾಂಡಿಚೆರಿಗೆ ಹೋದಾಗ ಭಾರತಿಯವರ ಪತ್ನಿ ಚೆಲ್ಲಮ್ಮಾಳ್ ಹಾಗೂ ಅವರ ಭಾವನವರು

ಪಟ್ಟಣದಲ್ಲಿರಲಿಲ್ಲ. ಆಗ ಅವರು ಕೂಡಲೂರಿಗಿಂತ ದೂರ ಇದ್ದರು. ಭಾರತಿಯವರು ಮದ್ರಾಸ್ ಬಿಡುತ್ತಿರುವ ಸುದ್ದಿ ತಿಳಿದು ಅವರಿಗೆ ಭಾರತಿಯವರನ್ನು ಕಾಣಬೇಕೆಂದೆನಿಸಿ ಪಾಂಡಿಚೆರಿಗೆ ಬಂದು ಅವರನ್ನು ಕಂಡು ಅವರಿಗೆ ಬಟ್ಟೆಗಳು, ಹಣವನ್ನು ಕೊಟ್ಟು ತನ್ನ ತಂಗಿ ಚೆಲ್ಲಮ್ಮಾಳ್‌ರನ್ನು ನೋಡಿಕೊಳ್ಳಲು ಹೇಳಿದರು.

ಭಾರತಿಯವರು ಪಾಂಡಿಚೆರಿಗೆ ಬಂದ ಮೇಲೆ ಅನೇಕ ರಾಷ್ಟ್ರ ನಾಯಕರು ತಂಗಲು ಇದೇ ಕ್ಷೇಮವಾದ ಸ್ಥಳವೆಂದು ತಿಳಿದರು. ಪಾಂಡಿ ಚೆರಿಗೆ ಅರಬಿಂದಘೋಷ್ ಏಕೆ ಬಂದರು ಎಂಬುದಕ್ಕೂ ಇದೇ ಕಾರಣ.

ಭಾರತಿಯವರು ಪಾಂಡಿಚೆರಿಗೆ ಹೋಗುವ ಮುಂಚೆ ಅವರ ಪ್ರಥಮ ಕವನಸಂಕಲನವಾದ "ಸ್ವದೇಶ ಗೀತೆಗಳು" ತಮಿಳ್ನಾಡಿನಲ್ಲಿ ಪ್ರಕಟವಾಯಿತು. ಅದು ತುಂಬಾ ಚಿಕ್ಕ ಕವನಸಂಕಲನವಾದರೂ ಸಹ ಈ ಮುಂಚೆ ವಿ. ಕೃಷ್ಣಸ್ವಾಮಿಅಯ್ಯರ್‌ರವರಿಂದ ಮೂರು ಪದ್ಯ ಗಳಿರುವ ಮತ್ತೊಂದು ಚಿಕ್ಕ ಪುಸ್ತಕ ಪ್ರಕಟವಾಗಿತ್ತು. ರಾಷ್ಟ್ರ ನಾಯಕರ ಅಭಿಪ್ರಾಯಗಳು, ಆದರ್ಶಗಳನ್ನು ಆ ಕವನಗಳು ಒಳ ಗೊಂಡಿದ್ದವು.

ಈ ವರ್ಷಗಳಲ್ಲಿ ಭಾರತಿಯವರು ಅನೇಕ ಕವನಗಳನ್ನು ರಚಿಸಿ ದರು. ಅವುಗಳಲ್ಲಿ ಕೆಲವನ್ನು ಈಗ ನೋಡಬಹುದು.

೧೯೦೮ರಿಂದ ೧೯೦೯ರ ಮಧ್ಯೆ ಬರೆದ ಕವನಗಳು ಸ್ವಾತಂತ್ರ್ಯದ ಬಗೆಗಿವೆ ಎಂದುಕೊಂಡಿದ್ದರು. ಈ ಪದ್ಯದ ಅರ್ಥ ಈ ಕೆಳ ಕಂಡಂತಿದೆ :

೧ ನಾಯಕತ್ವದ ಸ್ವಾತಂತ್ರ್ಯವನ್ನು
ಬಯಸುವಂಥ ಜನಗಳಿದ್ದರೆ ?
ಬೇರೆ ಏನನ್ನಾದರೂ ಬಯಸುವಂತೆ

ಇಲ್ಲ ಸ್ವರ್ಗದಂತಹ ಅಮೃತವನ್ನು
ಕುಡಿಯಬೇಕೆಂದಿದ್ದರೆ ?
ಮದ್ಯವನ್ನು ಇಷ್ಟಪಡುವ ಹಾಗೆ

೨ ಕೀರ್ತಿ ಮತ್ತು ಧರ್ಮವನ್ನು ಬಿಟ್ಟು ಜಗತ್ತೆಲ್ಲಾ
ಅಶಾಶ್ವತ ಎಂದು ಯಾರು ತಿಳಿಯುವರೋ ಅವರು
ಏನನ್ನೂ ಸಾಧಿಸಲಾರರು

೩ ಒಂದು ಪಕ್ಷ ಹುಟ್ಟಿದ ಜನಗಳೆಲ್ಲಾ
ಒಂದಲ್ಲಾ ಒಂದು ದಿನ ಸತ್ತೇ ಸಾಯುತ್ತಾರೆ ಎಂಬುದು
ತಿಳಿದಿದ್ದರೆ
ಮಾನವನ್ನು ಬಿಟ್ಟು ಬದುಕಲು ಸಾಧ್ಯವೇ ?

೪ ಮಾನವನಾಗಿ ಹುಟ್ಟುವುದೇ ಮಹತ್ವದ್ದು
ಎಂದು ಜನಗಳು ಯೋಚಿಸಿದರೆ
ಅವರು ಸತ್ಯವನ್ನು ಮರೆಯುವರೇ ?

೫ ಯಾರಾದರೂ ಚಂದ್ರನನ್ನು ಮಾರಲು
ನಕ್ಷತ್ರಗಳನ್ನು ಕೊಳ್ಳಲು ಸಾಧ್ಯವೇ ?
ಅದೇ ಸ್ಥಳದಲ್ಲಿ ?
ಅವರು ಸ್ವತಂತ್ರ ಕಳೆದುಕೊಂಡ ಮೇಲೆ
ಬದುಕಲು ಸಾಧ್ಯವೇ ?

೬ ಮಣ್ಣಿನ ಸಾಮಾನ್ಯ ಗುಣವನ್ನು ಇಷ್ಟಪಟ್ಟು
ಸ್ವತಂತ್ರ್ಯವನ್ನು ಕಳೆದುಕೊಳ್ಳಲು ಅವರು ಇಷ್ಟಪಡುವರೇ ?

ಅವರು ಕಣ್ಣುಗಳನ್ನು ಕಳೆದುಕೊಂಡ ಮೇಲೆ
ಬಣ್ಣಗಳನ್ನು ಕೊಂಡರೆ
ಜನ ಅವರನ್ನು ನೋಡಿ ನಗುವುದಿಲ್ಲವೇ ?

೭ ವಂದೇ ಮಾತರಂ ಮಂತ್ರವನ್ನು ಪೂಜಿಸಿದ
ಮೇಲೆ, ಹೇಳಿದ ಮೇಲೆ
ಯಾರಾದರೂ ಭ್ರಮೆಯನ್ನು ಪೂಜಿಸುವರೇ ?
ವಂದೇ ಮಾತರಂ ಎಂಬುದು ಒಂದೇ ಮಂತ್ರ
ಎಂಬುದನ್ನು ಅವರು ಮರೆಯುವರೇ ?

ಆಗ ಭಾರತಿಯವರು ಪಾಂಡಿಚೆರಿಯಲ್ಲಿ ತಂಗಿರುವ ವಿಷಯ ತಿಳಿದು ಪೋಲೀಸಿನವರು ಪಾಂಡಿಚೆರಿಗೆ ಬಂದು ಅವರಿಗೆ ತೊಂದರೆ ಕಿರುಕುಳ ಕೊಡಲು ಪ್ರಾರಂಭಿಸಿದರು. ಆದ್ದರಿಂದ ಅವರು ಪಾಂಡಿಚೆರಿಯ ಪೋಲೀಸರನ್ನು ಕಂಡರು. ಆಗ ಪಾಂಡಿಚೆರಿಯ ಪೋಲೀಸಿನವರು ಭಾರತಿಯವರಿಗೆ ತಂಗಲು ಆಶ್ರಯಕೊಟ್ಟ ವ್ಯಕ್ತಿಯನ್ನು ಕರೆಸಿದರು. ಕುಪ್ಪುಸ್ವಾಮಿ ಅಯ್ಯಂಗಾರ್‌ರವರು ಸದಾಚಾರದ ಹಾಗೂ ವ್ಯಾವಹಾರಿಕ ವ್ಯಕ್ತಿಯಾಗಿದ್ದು ರಾಜಕೀಯ ಚಟುವಟಿಕೆಗಳಲ್ಲಿ ಯಾವುದೇ ರೀತಿಯ ಸಂಬಂಧ ಹೊಂದಿಲ್ಲದ ಕಾರಣ ಪೋಲೀಸಿನವರ ಮಾತಿನಂತೆ ಭಾರತಿಯವರನ್ನು ಹೊರಗೆ ಹೋಗಲು ಹೇಳಬೇಕಾಗಿ ಬಂತು. ಆಗ ಭಾರತಿಯವರು ತೀರಾ ಸಂದೇಹವಾಗಿ ದ್ವಿಮನಸರಾಗಿ ಅವರ ಮಾತಿನಂತೆ ನಡೆದುಕೊಂಡರು. ಕಾರಣ ತಮ್ಮನ್ನು ಇಲ್ಲಿಗೆ ಕಳಿಸಿದ ವ್ಯಕ್ತಿಗೆ ಭಾರತಿಯವರು ತುಂಬಾ ಗೌರವ ಕೊಡುತ್ತಿದ್ದರು. ಇದಕ್ಕಾಗಿ ತುಂಬಾ ವ್ಯಾಕುಲಪಟ್ಟರು. ಇಂಡಿಯಾ ಪತ್ರಿಕೆಯ ವಿಳಾಸಗಳನ್ನು ಮದ್ರಾಸಿನಲ್ಲೇ ಬಿಟ್ಟು ಬಂದಿದ್ದರು. ಅವರಿಗೆ ಏನು ಮಾಡಬೇಕೆಂಬುದೇ ತೋಚಲಿಲ್ಲ. ಆ ಸಮಯದಲ್ಲಿ ಕುವಲೈಕಣ್ಣನ್

ಎಂಬ ಭಾರತಿಯವರ ಸ್ನೇಹಿತರು ಅಲ್ಲಿಗೆ ಬಂದಿದ್ದರು. ಆಗ ಭಾರತಿಯವರು ಅವರ ಸಮಸ್ಯೆಗಳನ್ನು ಅವರ ಬಳಿ ಹೇಳಿ ನಂತರ "ಇಂಡಿಯಾ" ಪತ್ರಿಕೆಯ ಚಂದಾದಾರರು ಯಾರಾದರೂ ಹತ್ತಿರದಲ್ಲೆಲ್ಲಾವರೂ ಇದ್ದಾರೆಯೇ ಎಂದು ತಿಳಿದುಕೊಳ್ಳಬೇಕೆಂದುಕೊಂಡಿದ್ದರು. ಆಗ ಕುವಲೈಕಣ್ಣನ್‌ರವರು ಸುಂದರೇಶ್‌ಅಯ್ಯರ್ ಎಂಬುವರು 'ಇಂಡಿಯಾ' ಪತ್ರಿಕೆಯ ಚಂದಾದಾರರು ಎಂದು ತಿಳಿಸಿದರು. ಭಾರತಿಯವರು ಪಾಂಡಿಚೆರಿಯಲ್ಲೇ ಇದ್ದಾರೆಂಬ ವಿಷಯ ತಿಳಿದ ಸುಂದರೇಶ್‌ಅಯ್ಯರ್‌ರವರು ತುಂಬಾ ಸಂತೋಷಗೊಂಡು ಭಾರತಿಯವರನ್ನು ತಮ್ಮ ಮನೆಗೆ ಕೊಂಡೊಯ್ದು ಅವರಿಗೆ ತಂಗಲು ಅನುಕೂಲಗಳನ್ನು ಮಾಡಿಕೊಟ್ಟರು.

ಭಾರತಿಯವರ ಬಗ್ಗೆ ಪಾಂಡಿಚೆರಿಯ ಜನ ಅವರೊಬ್ಬ ಕ್ರಾಂತಿಕಾರಿ ಕವಿಯೆಂದು ತಿಳಿದು ಗೌರವಿಸಹತ್ತಿದರು. ಆದರೆ ಕೆಲ ಜನರು ಬೇರೆ ರೀತಿ ಯೋಚಿಸಿದರು. ಬ್ರಿಟಿಷರಿಗೆ ಭಯಪಟ್ಟು ಅಲ್ಲಿಂದ ತಪ್ಪಿಸಿಕೊಂಡು ಬಂದು ಇಲ್ಲಿ ತಂಗಿದ್ದಾರೆಂದುಕೊಂಡರು.

ಭಾರತದ ಮತ್ತು ಪಾಂಡಿಚೆರಿಯ ಪೋಲೀಸ್‌ನವರ ಕಾವಲಿನಲ್ಲಿ ಭಾರತಿಯವರಿರಬೇಕಾದರೆ ಮದ್ರಾಸಿನಿಂದ ಪಾಂಡಿಚೆರಿಗೆ ತಿರುಮಲಾಚಾರಿಯಾರ್‌ರವರು ಬಂದರು. ಅವರು ಆಗಾಗಲೇ ಮಂಡಾಯಮ್ ಶ್ರೀನಿವಾಸಾಚಾರ್‌ರವರನ್ನು ಭೇಟಿಯಾಗಿ ಬಂದಿದ್ದರು. ಭಾರತಿಯವರು "ಇಂಡಿಯಾ" ಪತ್ರಿಕೆಯನ್ನು ಪಾಂಡಿಚೆರಿಯಿಂದ ಪ್ರಾರಂಭಿಸುವ ತೀರ್ಮಾನದ ಕಾರಣ ತಕ್ಷಣ ಮುದ್ರಣಾಲಯವನ್ನು ಮದ್ರಾಸಿನಿಂದ ಪಾಂಡಿಚೆರಿಗೆ ಸಾಗಿಸಿದರು. ಆದರೆ ಆ ವೇಳೆಗಾಗಲೇ ಭಾರತಿಯವರು ಪಾಂಡಿಚೆರಿಯ ನೈಸರ್ಗಿಕ ಸನ್ನಿವೇಶಗಳು ಹಾಗೂ ಅವರ ಸಂಸ್ಕೃತಿಯ ಬಗ್ಗೆ ಮಹದಾದರಗಳನ್ನು ಬೆಳೆಸಿಕೊಂಡು ಅವರು ಅಲ್ಲಿನ ಸಮುದ್ರ ತೀರಗಳನ್ನು, ಬೀದಿಗಳನ್ನು, ಉದ್ಯಾನಗಳನ್ನು ತುಂಬ ಇಷ್ಟಪಡುತ್ತಿದ್ದರು. ಯಾವುದೇ ರೀತಿಯ ಸಮಸ್ಯೆ ಇಲ್ಲದೆ ತಿರುಮಲಾಚಾರಿ

ಯಾರ್‌ರವರು ಮದ್ರಾಸಿನಲ್ಲಿ ತಮ್ಮ ಯಜಮಾನರಿಂದ ಅನುಮತಿ ಪಡೆದು ತಾವೇ ವಹಿಸಿಕೊಂಡರು. ಆದರೆ ಅವರು ಮುದ್ರಣಾಲಯ ಪಾಂಡಿಚೆರಿಯಲ್ಲಿ ಆರಂಭಿಸಬೇಕೆಂದರೆ ಫ್ರೆಂಚ್-ಭಾರತೀಯನ ಹೆಸರಿನಲ್ಲಿ ನೋಂದಾಯಿಸಬೇಕಿತ್ತು. ಆದ್ದರಿಂದ ಅವರು ಆ ವ್ಯಕ್ತಿಯನ್ನು ಭೇಟಿಯಾಗಬೇಕಿತ್ತು. ಆದರೆ ಅದೇನೂ ಅವರಿಗೆ ಕಷ್ಟದ ಕೆಲಸವಾಗಿರಲಿಲ್ಲ. ಲಕ್ಷ್ಮೀನಾರಾಯಣಅಯ್ಯರ್‌ರವರು ತಮ್ಮ ಹೆಸರಿನಲ್ಲಿ ನೋಂದಾಯಿಸಲು ಸಿದ್ಧರಿದ್ದರು. ಅವರು ಹುಟ್ಟಿನಿಂದ ಪಾಂಡಿಚೆರಿಯವರೇ ಆಗಿದ್ದರು. ಕಛೇರಿಯ ಕಾರ್ಯಕ್ರಮಗಳಿಗೆ ಒಂದು ಮನೆಯನ್ನು ಸಿದ್ಧಗೊಳಿಸಿದರು. ಶಂಕರನಾರಾಯಣಯಾರ್ ಎಂಬ ಮತ್ತೊಬ್ಬ ವ್ಯಕ್ತಿ ಈ ಪತ್ರಿಕೆ ಮುಂದೆ ಬರಲು ಸಹಕರಿಸಿದರು. ಹೀಗೆ 'ಇಂಡಿಯಾ' ಪತ್ರಿಕೆ ಪಾಂಡಿಚೆರಿಯಿಂದ ಬರಲು ಪ್ರಾರಂಭಿಸಿತು. ಆಗ ಸುಮಾರು ೮ ಜನ ತಮಿಳ್ನಾಡಿನಿಂದ ಬಂದು ಇಂಡಿಯಾ ಪತ್ರಿಕೆಗೆ ಸೇರಿಕೊಂಡರು. ಫ್ರೆಂಚ್ ಮಣ್ಣಿನವರ ಸಹಾಯದಿಂದ ಭಾರತ ಮತ್ತು ರಾಷ್ಟ್ರೀಯ ನಾಯಕರ ಚಟುವಟಿಕೆಗೆ ಪ್ರೋತ್ಸಾಹ ಪಡೆಯಲು ಪ್ರಾರಂಭಿಸಿತು. ಆಗ ಈ ಪತ್ರಿಕೆ ಭಾರತಕ್ಕೆ ವಿರುದ್ಧವಾಗಿರುವಂತಹ ಬ್ರಿಟಿಷರಿಗೆ ಹಾಗೂ ಬ್ರಿಟಿಷರ ಪರವಾಗಿದ್ದಂತಹ ಭಾರತೀಯರ ಮೇಲೆ ಬೆಂಕಿಯನ್ನು ಸುರಿಸಲು ಪ್ರಾರಂಭಿಸಿತು. ಆ ಸಮಯದಲ್ಲಿ ೧೯೦೯ರಲ್ಲಿ ಇಂಡಿಯಾ ಪತ್ರಿಕೆಯ ಕೀರ್ತಿ ಪ್ರತಿಷ್ಠೆಯನ್ನು ಹೆಚ್ಚಿಸುವ ಕವನ ಆ ಪತ್ರಿಕೆಯಲ್ಲಿ ಬಂತು. ಆ ಕವನದ ಒಂದು ಭಾಗವನ್ನು ನೋಡಬಹುದು :

"ಸ್ವಾತಂತ್ರ್ಯಕ್ಕೋಸ್ಕರ ಹಂಬಲಿಸುತ್ತಿರುವ ನಮ್ಮ ಹಸಿವು
ಯಾವಾಗ ಕುಗ್ಗುತ್ತದೆ ? ಶಾಂತವಾಗುತ್ತದೆ ?
ಗುಲಾಮಗಿರಿಯ ಮನೋಭಾವ ಯಾವಾಗ ಹೋಗುತ್ತದೆ ?

ನಮ್ಮ ತಾಯಿಯ ಸಂಕೋಲೆ ಯಾವಾಗ ಹೋಗುತ್ತದೆ ?
ನಮ್ಮ ದುಃಖಗಳು ಕೊನೆಗೊಳ್ಳುವುದು ಯಾವಾಗ ?

ಅದೇ ವರ್ಷದಲ್ಲಿ ಇಂಡಿಯಾ ಪತ್ರಿಕೆಯಲ್ಲೇ ಭಾರತಿಯವರು ಮತ್ತೊಂದು ಕವನ ಬರೆದರು :

"ನಾವು ನಮ್ಮ ಸುಂದರ ವಾತಾವರಣದ ಮನೆಗಳಿಂದ
ಎಳೆತಂದು
ಜೈಲಿನಲ್ಲಿ ಸೆರೆಮನೆಯಲ್ಲಿಟ್ಟಿದ್ದರೂ ಸಹ
ಹಣ ಅಂತಸ್ತಿನ ವಿಷಯದಲ್ಲಿ ಕೆಳಮಟ್ಟದಲ್ಲಿ ಕಾಣಿಸಿ
ಕೊಂಡರೂ, ಕೆಟ್ಟ ಮಾತುಗಳನ್ನು ಕೇಳಿದರೂ ಸಹ
ಕೋಟಿಗಟ್ಟಲೆ ದುಃಖಗಳು, ಕಷ್ಟಗಳು ಬಂದು ನಮ್ಮನ್ನು
ನಾಶಗೊಳಿಸಿದರೂ ಸಹ
ಓ ! ಸ್ವಾತಂತ್ರ್ಯದೇವಿ ! ನಾವು ಮಾತ್ರ
ನಿನ್ನ ಪೂಜೆಯನ್ನು ನಿಲ್ಲಿಸುವುದಿಲ್ಲ

ಆ ಸಮಯದಲ್ಲೆ ಹೊರಬಂದ ಮತ್ತೊಂದು ಕವನದಲ್ಲಿ ಸಮಾನತೆಗಾಗಿ ಭಾರತಿಯವರಿಗಿದ್ದ ಪ್ರೀತಿ ವ್ಯಕ್ತವಾಗಿತ್ತು. ಅವರು ವರ್ಗಗಳಲ್ಲಷ್ಟೇ ಅಲ್ಲದೆ ಜಾತಿಗಳಲ್ಲೂ ಸಮಾನತೆಯನ್ನು ಬಯಸಿದ್ದರು. ನಮ್ಮ ಸಮಾಜದ ಮೇಲ್ವರ್ಗದವರ ಬಗ್ಗೆ ಹಾಗೂ ಬ್ರಿಟಿಷರ ಬಗ್ಗೆ ಸಮಾನವಾಗಿ ಆಲೋಚಿಸುತ್ತಿದ್ದರು. ಸಮಾಜದ ಕೇಡು, ಪಾಪಗಳು, ದುರ್ಮಾರ್ಗಗಳಿಗೆ ಕಾರಣರಾದವರ ಮೇಲೆ ದಾಳಿ ಮಾಡಿದರು. ಅದರ ಅರ್ಥ ಈ ರೀತಿ ಇದೆ :

"ನಾವು ಹಾಡೋಣ ಮತ್ತು ಕುಣಿಯೋಣ
ಸ್ವಾತಂತ್ರ್ಯ ಗಳಿಸಿದ ಸಂತೋಷಕ್ಕಾಗಿ
ಒಬ್ಬ ಬ್ರಾಹ್ಮಣನನ್ನು 'ನಮ್ಮ ನಾಯಕ' ಎಂದು
ಕರೆಯುತ್ತಿದ್ದ ಕಾಲ ಹೋಯಿತು
ಒಬ್ಬ ಬಿಳಿ ಪರದೇಶಿಯನ್ನು "ನಮ್ಮ ಯಜಮಾನ" ಎಂದು
ಕರೆಯುತ್ತಿದ್ದ ಕಾಲ ಹೋಯಿತು

ಆಗಾಗ ಉದ್ಧರಿಸುವ ಈ ಪದ್ಯ ಸ್ವಾತಂತ್ರ್ಯ ಈಗಾಗಲೇ ಬಂದಿದೆ ಎನ್ನುವುದನ್ನು ಹೇಳುತ್ತದೆ. ಆದರೆ ಈ ಪದ್ಯ "ಭಾರತ"ವನ್ನು ೧೯೦೯ನೇ ಇಸವಿಯಲ್ಲಿ ಬರೆದದ್ದು. ಈ ಪದ್ಯ ಸ್ವಾತಂತ್ರ್ಯಾನಂತರದ ತಮಿಳುನಾಡಿನ ರಾಜಕೀಯ ಮುಂಚೂಣಿಯಲ್ಲಿನ ಬ್ರಾಹ್ಮಣೇತರ ಚಳುವಳಿಗೆ ಸ್ಫೂರ್ತಿ ನೀಡಿದ ಪದ್ಯಗಳಲ್ಲಿ ಒಂದು. ಅವರು ಅವರದೇ ಜಾತಿಯನ್ನೂ ಬಿಟ್ಟುಕೊಡಲಿಲ್ಲ. ಇದಕ್ಕೆ ಸಂಬಂಧಿಸಿದ ಹಾಗೆ ಒಂದು ಘಟನೆಯನ್ನು ನಿರೂಪಿಸಬಹುದು. ಸುಬ್ರಮಣ್ಯಭಾರತಿಯವರು ಬ್ರಿಟಿಷ್ ಸರ್ಕಾರದ ದಸ್ತಗಿರಿ ಆಜ್ಞೆಯಿಂದ ತಪ್ಪಿಸಿಕೊಂಡು ಪಾಂಡಿಚೆರಿಯಲ್ಲಿ ನೆಲೆಸಿದ್ದಾಗ, ಒಂದು ದಿನ ಒಬ್ಬ ಹುಡುಗನನ್ನು ಕರೆದರು ; ಆ ಹುಡುಗ ಹರಿಜನ ಕುಟುಂಬದವನೆಂದು ಎಲ್ಲರಿಗೂ ತಿಳಿದಿತ್ತು. ಆ ಹುಡುಗನ ಹೆಸರು ಕನಕಲಿಂಗಂ. ಸಾಮಾನ್ಯವಾಗಿ ಭಾರತಿಯವರು ಜನಿವಾರ ಧರಿಸುತ್ತಿರಲಿಲ್ಲ. ಆ ದಿನ ಭಾರತಿಯವರು ತಮಗೆ ಜನಿವಾರ ಕೊಡುವಂತೆ ತಮ್ಮ ಸಹಾಯಕರಿಗೆ ಹೇಳಿದರು. ಅವರು ಜನಿವಾರ ಕೊಟ್ಟರು. ಅದನ್ನು ಭಾರತಿಯವರು ಧರಿಸಿ ನಂತರ ಆ ಹುಡುಗನನ್ನು ಹತ್ತಿರಕ್ಕೆ ಕರೆದರು. ಆ ಹುಡುಗ ಹತ್ತಿರ ಬಂದ. ಭಾರತಿಯವರು ಆ ಹುಡುಗನಿಗೆ, ಅವನನ್ನು ಬ್ರಾಹ್ಮಣನನ್ನಾಗಿ ಮಾಡುತ್ತೇನೆಂದು ಹೇಳಿದರು. ಅಲ್ಲಿದ್ದವರೆಲ್ಲರೂ ತಲ್ಲಣಗೊಂಡರು. ಭಾರತಿಯವರು ಶಾಂತವಾಗಿದ್ದರು. ನಂತರ ಭಾರತಿ ಗಾಯತ್ರಿ ಮಂತ್ರ

ಗಳನ್ನು ಹೇಳಿ ಹೊಸ ಜನಿವಾರವನ್ನು ಕನಕಲಿಂಗಂಗೆ ಹಾಕಿದರು. ಭಾರತಿ ಅವರ ಸುತ್ತ ನೆರೆದಿದ್ದ ಜನರಿಗೆ, ಆ ಹುಡುಗನನ್ನು ಬ್ರಾಹ್ಮಣನನ್ನಾಗಿ ಮಾಡಿದ್ದೇನೆಂದು ಘೋಷಿಸಿದರು; ಆ ದಿನದಿಂದ ಎಲ್ಲರೂ ಆ ಹುಡುಗನನ್ನು ಬ್ರಾಹ್ಮಣನೆಂದು ಪರಿಗಣಿಸಬೇಕು ಮತ್ತು ಅವನೊಬ್ಬ ಬ್ರಾಹ್ಮಣನ ಹಾಗೆ ವರ್ತಿಸಬೇಕು ಎಂದೂ ಹೇಳಿದರು. ನಂತರ ಭಾರತಿ ಜನಿವಾರವನ್ನು ತೆಗೆದುಹಾಕಿದರು. ಆ ಸಮಯದಲ್ಲಿ, ಬ್ರಾಹ್ಮಣರಾದ, ನಂತರ ಹರಿಜನ ಹುಡುಗಿಯನ್ನು ಮದುವೆಯಾದ, ವಿ. ರಾಮಸ್ವಾಮಿಯವರು ಹಾಜರಿದ್ದರು. ವಿ. ರಾಮಸ್ವಾಮಿಯವರನ್ನು ವ. ರಾ. ಎಂದು ಕರೆಯುತ್ತಿದ್ದರು (ಅವರು ನಂತರ ಸುಬ್ರಮಣ್ಯಭಾರತಿಯವರ ಜೀವನ ಚರಿತ್ರೆಯನ್ನು ಬರೆದರು). ಭಾರತಿ ವ. ರಾ.ರವರನ್ನು ನೋಡಿದರು. ವ. ರಾ. ನಕ್ಕರು. ವ. ರಾ. ಅವರ ನಗೆಯನ್ನು ಭಾರತಿ ಅರ್ಥೈಸಿಕೊಂಡರು. ಹೊಸ ಬ್ರಾಹ್ಮಣನಾದ ಕನಕಲಿಂಗಂಗೆ ಬ್ರಾಹ್ಮಣ ಸಂಕೇತವಾದ ಜನಿವಾರ ಬೇಕು. ಆದರೆ ತಾವಿಬ್ಬರೂ ಬ್ರಾಹ್ಮಣರಾದುದರಿಂದ ನಮಗೆ ಜನಿವಾರ ಬೇಡವೆಂದು ಭಾರತಿ, ವ. ರಾ.ರಿಗೆ ಹೇಳಿದರು.

ವ. ರಾ.–ಭಾರತಿ ಕನಕಲಿಂಗಂನನ್ನು ಬ್ರಾಹ್ಮಣನನ್ನಾಗಿ ಮಾಡಲು ನಿರ್ಧರಿಸಿದ್ದೇಕೆಂದು ಕೇಳಿದಾಗ, ಭಾರತಿ ಹೀಗೆ ಉತ್ತರಿಸಿದರು. ಒಂದು ದಿನ ಭಾರತಿಯವರು ಪಾಂಡಿಚೆರಿಯಲ್ಲಿ ಹತ್ತಿರದ ಮಾರಿಯಮ್ಮನ ದೇವಸ್ಥಾನಕ್ಕೆ ಹೋಗಿದ್ದಾಗ ಅಲ್ಲಿ ಈ ಹುಡುಗನನ್ನು ಕಂಡರು. ನಂತರ ಭಾರತಿ ಹೇಳಿದರು: ಒಬ್ಬ, ಬ್ರಾಹ್ಮಣನಾಗಿ ಹುಟ್ಟುವುದಿಲ್ಲ, ಯಾರನ್ನಾದರೂ ಬ್ರಾಹ್ಮಣನನ್ನಾಗಿಸಬಹುದು, ಆದರೆ ಅವನು ನಿಜವಾದ ಬ್ರಾಹ್ಮಣನ ಕೆಲಸ ಮಾಡಬೇಕು.

ಈ ಘಟನೆಯು ಭಾರತಿಯವರು ಎಂತಹ ಕ್ರಾಂತಿಕಾರಿ ಮನಸ್ಸನ್ನು ಹೊಂದಿದ್ದರೆಂದು ತೋರಿಸುತ್ತದೆ. ಅವರು ಬದುಕಿನಲ್ಲಿ

ಕ್ರಾಂತಿಕಾರಿ ಜೀವನವನ್ನು ನಡೆಸಿದರು, ಹಾಗೆಯೇ ಕ್ರಾಂತಿಕಾರಿ ಕವನಗಳನ್ನು ಬರೆದರು.

"ಇಂಡಿಯಾ" ಪತ್ರಿಕೆಯ ಆಡಳಿತ ಮಂಡಳಿಯಲ್ಲಿ ಕೆಲವು ಸಮಸ್ಯೆಗಳಿದ್ದವು. ಆದಕಾರಣ ಆಡಳಿತ ಮಂಡಳಿಯಲ್ಲಿ ಕೆಲವು ಬದಲಾವಣೆಗಳಾದವು. ಆ ಹೊಸ ಆಡಳಿತ ವ್ಯವಸ್ಥೆಗೆ ಭಾರತಿ ಹೊಂದಿಕೊಳ್ಳಲಾಗಲಿಲ್ಲ. ಸುಬ್ರಮಣ್ಯಭಾರತಿಯವರೊಂದಿಗೆ ಕೆಲಸಮಾಡಿದ ಅನೇಕರು "ಇಂಡಿಯಾ"ವನ್ನು ಬಿಟ್ಟರು. ಭಾರತಿಯವರೂ ಸಹ ಆಡಳಿತ ವ್ಯವಸ್ಥೆಯ ಕಟ್ಟುಪಾಡುಗಳಿಂದಾಗಿ ಈ ಪತ್ರಿಕೆಯನ್ನು ಬಿಟ್ಟರು.

ಆದರೆ ಸುಬ್ರಮಣ್ಯಭಾರತಿಯವರು ಆ ಪತ್ರಿಕೆಯಲ್ಲಿದ್ದಾಗ ಜನರಲ್ಲಿನ ರಾಷ್ಟ್ರೀಯತಾ ಭಾವನೆಗಳನ್ನು ಆ ಪತ್ರಿಕೆಯ ಮೂಲಕ ಮರಿದುಂಬಿಸಲು ಶಕ್ತರಾಗಿದ್ದರು. ಆ ಪತ್ರಿಕೆಯಲ್ಲಿ ಕಂಡ ಕೆಲವು ಮಾಹಿತಿಗಳು ಈ ಅಂಶವನ್ನು ದೃಢಪಡಿಸುತ್ತವೆ.

ಒಮ್ಮೆ ಭಾರತಿ ಹೀಗೆ ಬರೆದರು :

"ಏಯ್! ನಾಚಿಕೆಗೆಟ್ಟ ಭಾರತೀಯನೆ, ನನ್ನನ್ನು ಕೇಳು! ನಿನ್ನ ಮನೆಯಲ್ಲಿಯೇ ನಿನ್ನನ್ನು ಸೇವಕನಂತೆ ನಡೆಸಿಕೊಂಡರೆ ಏಕೆ ದೂರು ನೀಡುವೆ, ನಿನ್ನನ್ನು ಆಸ್ಟ್ರೇಲಿಯ ಮತ್ತು ಟ್ರಾನ್ಸ್ವಾಲ್‌ನಲ್ಲಿ ಸರಿಯಾಗಿ ಸತ್ಕರಿಸದಿರುವಾಗ? ಎಂತಹ ಅಜ್ಞಾನವನ್ನು ಹೊಂದಿದ್ದೆ ನೀನು?

ಆಸ್ಟ್ರೇಲಿಯ ಮತ್ತು ಟ್ರಾನ್ಸ್‌ವಲ್‌ನ ಜನ ನಮ್ಮನ್ನು ಸರಿಯಾಗಿ ಸತ್ಕರಿಸದಿದ್ದರೆ ನಮಗಿರುವುದು ಒಂದೇ ಒಂದು ದಾರಿ. ಆಸ್ಟ್ರೇಲಿಯದ ಬಿಳಿಯರು ಅಥವಾ ಟ್ರಾನ್ಸ್‌ವಲ್‌ನ ಬಿಳಿಯರು ಇಲ್ಲಿಗೆ ಬಂದರೆ, ನಾವು ಅವರ ಮೇಲೆ ಪ್ರತೀಕಾರ ತೀರಿಸಿಕೊಳ್ಳಬೇಕು, ಮತ್ತೊಂದು ದಾರಿ ಇಲ್ಲ. ನಾವು ಹೀಗೆ ಮಾಡದ ಹೊರತು ಈ ಘಟಿಂಗರು ಪಾಠ ಕಲಿಯುವುದಿಲ್ಲ.

ಸರ್ಕಾರಕ್ಕೆ ದೂರು ನೀಡುವುದರಿಂದ ಯಾವ ಅರ್ಥವೂ ಇಲ್ಲ."

ಈ ಬರಹವು ಹೇಗೆ ಭಾರತಿಯವರು ಬ್ರಿಟಿಷರನ್ನು ದ್ವೇಷಿಸುತ್ತಿದ್ದರು ಮತ್ತು ಪ್ರಪಂಚದ ವಿವಿಧ ಭಾಗಗಳಲ್ಲಿ ನೆಲೆಸಿದ್ದ ಭಾರತೀಯರನ್ನು ಹೇಗೆ ಪ್ರೀತಿಸುತ್ತಿದ್ದರೆನ್ನುವುದನ್ನು ತೋರಿಸುತ್ತದೆ.

"ಇಂಡಿಯಾ"ದ ಮತ್ತೊಂದು ಸಂಚಿಕೆಯಲ್ಲಿ ಅವರು ಹೀಗೆ ಬರೆದರು :

"ಸ್ವಾಮಿ ವಿವೇಕಾನಂದರು ೩೦ ಕೋಟಿ ಭಾರತೀಯರನ್ನು ಆರಾಧಿಸುವಂತೆ ಜನರಿಗೆ ಹೇಳಿದರು. ಅವರು, ಈ ೩೦ ಕೋಟಿ ಜನ ನಿಜವಾಗಿ ದೇವತೆಗಳೆಂದರು. ಅವರು ನಮ್ಮ ದೇವತೆಯಾದ ಮಹಾಶಕ್ತಿಯ ಪ್ರತಿರೂಪ, ನೀವು ಈ ಜನರನ್ನು ಪೂಜಿಸಿ, ಇದು ನಮ್ಮ ಧರ್ಮ. ಮತ್ತೊಂದು ಧರ್ಮ ಇಲ್ಲ.

ಭಾರತ ದೇಶ ಈ ಧರ್ಮವನ್ನು ಸಂಪೂರ್ಣವಾಗಿ ಗುರುತಿಸುತ್ತಿದೆ. ಆದರೆ ತಮಿಳು ಜನ ಈ ಧರ್ಮವನ್ನು ಅನುಸರಿಸುತ್ತಿಲ್ಲ. ಇದೊಂದು ತಪ್ಪು. ತಮಿಳು ಜನರೇನಾದರೂ ಈ ತಪ್ಪನ್ನು ತಿದ್ದಿಕೊಳ್ಳದಿದ್ದರೆ, ಅವರೆಲ್ಲರೂ ನಾಶವಾಗುತ್ತಾರೆ. ಆದ್ದರಿಂದ ಎದ್ದೇಳಿ !"

ಈ ಬರಹದ ಭಾಗವು, ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ಯಾವ ರೀತಿಯ ಹೋರಾಟವನ್ನು ಪ್ರೋತ್ಸಾಹಿಸಿದರೆಂದು ತಿಳಿಸುತ್ತದೆ.

ನಂತರ, "ಇಂಡಿಯಾ" ಪತ್ರಿಕೆಯಲ್ಲಿನ ಉದ್ಯೋಗವನ್ನು ಬಿಟ್ಟ ಮೇಲೆ ಮತ್ತೊಬ್ಬ ವ್ಯಕ್ತಿ ಇವರನ್ನು 'ಸೂರಿಯೋದಯಂ' ಪತ್ರಿಕೆಯನ್ನು ಸೇರಲು ಆಹ್ವಾನಿಸಿದರು.

ಭಾರತಿಯವರ ಬರಹಗಳಿಂದಾಗಿ "ಸೂರಿಯೋದಯಂ" ಅತ್ಯುತ್ತಮ ಓದುಗರನ್ನು ಪಡೆಯಿತು. ಆದರೆ ಮತ್ತೆ ಭಾರತಿಯವರು ಪಾಂಡಿಚೆರಿಯಲ್ಲಿ ಈ ಪತ್ರಿಕೆಯನ್ನು ಬಿಡಬೇಕಾಯಿತು. ನಂತರ "ಇಂಡಿಯಾ" ಪತ್ರಿಕೆಯೂ ನಿಂತಿತು. ಭಾರತಿ ಮತ್ತೊಂದು ಪತ್ರಿಕೆಯನ್ನು ಸೇರಿದರು. ಅದು "ವಿಜಯ" ಎನ್ನುವ ದಿನಪತ್ರಿಕೆ.

ಸುಬ್ರಮಣ್ಯಭಾರತಿಯವರು, ಅರಬಿಂದೋರನ್ನು ಬಹುಮಟ್ಟಿಗೆ ಪ್ರತಿ ದಿನವೂ ಭೇಟಿಯಾಗಿ ಚರ್ಚಿಸುತ್ತಿದ್ದರು. ಆಗ ಅರಬಿಂದೋರ ಬಂಗಲೆಯಲ್ಲಿ ಬಂಗಾಳದ ಮತ್ತು ತಮಿಳುನಾಡಿನ ಸುಮಾರು ಇಪ್ಪತ್ತು ಜನ ರಾಷ್ಟ್ರೀಯತಾ ಆಸಕ್ತಿಯುಳ್ಳ ಜನ ವಾಸಿಸುತ್ತಿದ್ದರು. ವೇದ ಉಪನಿಷತ್ತುಗಳ ಬಗೆಗಿನ ಭಾರತಿಯವರ ಅರ್ಥವಂತಿಕೆಯು ಅರಬಿಂದೋರ ಪ್ರಭಾವದಿಂದ ಮತ್ತಷ್ಟು ತೀಕ್ಷ್ಣವಾಯಿತು. ಈ ಕಾಲದಲ್ಲಿ ಭಾರತಿಯವರು ಗೀತೆಯನ್ನು ತಮಿಳಿಗೆ ಅನುವಾದಿಸಿದರು. ಹಾಗೆಯೇ ವೇದಗಳ ಕೆಲವು ಭಾಗಗಳನ್ನು ಇಂಗ್ಲೀಷಿಗೆ ಅನುವಾದಿಸಿದರು. ಭಾರತಿ ಪತಂಜಲ ಯೋಗವನ್ನು ಅಧ್ಯಯನ ಮಾಡಿ ತಮಿಳಿಗೆ ಅನುವಾದಿಸಿದರು. ಆದರೂ ಭಾರತಿಯವರು ಪರಶಕ್ತಿಯ ಬಗ್ಗೆ ಅಪಾರವಾದ ಪ್ರೀತಿ ಮತ್ತು ಭಕ್ತಿಯನ್ನು ಹೊಂದಿದ್ದರು. ಅರಬಿಂದೋರೊಂದಿಗಿನ ಗೆಳೆತನ ಅವರನ್ನು ಪರಶಕ್ತಿಗೆ ಹೆಚ್ಚು ಭಕ್ತಿ ತೋರುವಂತೆ ಮಾಡಿತು. ಸುಬ್ರಮಣ್ಯಭಾರತಿಯವರ ಕಾವ್ಯವನ್ನು ಅರಬಿಂದೋರವರು ಸಹ ಆನಂದಿಸಿದರು.

ಭಾರತದ ಬ್ರಿಟಿಷ್ ಸರ್ಕಾರ ಅವರನ್ನು ಶಾಂತಿಯಿಂದ ಕಾಲ ಕಳೆಯಲು ಬಿಡಲಿಲ್ಲ. ಅವರಿಗೆ ಬೇಕಾದಷ್ಟು ತೊಂದರೆಗಳನ್ನು ಕೊಟ್ಟರು. ಅವರು ಭಾರತಿಯವರ ಪತ್ರಿಕೆಯನ್ನು ಬ್ರಿಟಿಷ್ ಭಾರತವನ್ನು ತಲುಪಲು ಬಿಡಲಿಲ್ಲ. ಯಾರಾದರೂ ಆ ಪತ್ರಿಕೆಯನ್ನು ಮಾರುವ ಉಪಾಯ ಮಾಡಿದರೂ ಬ್ರಿಟಿಷ್ ಸರ್ಕಾರ ಆ ಹಣವನ್ನು ಪತ್ರಿಕೆಗೆ ಕಳಿಸಲು ಬಿಡುತ್ತಿರಲಿಲ್ಲ. ಈ ಯಾವುದೇ ಅಡಚಣೆ ಭಾರತಿಯವರು ಪರಶಕ್ತಿಯ ಬಗ್ಗೆ ಕಾವ್ಯ ಬರೆಯುವುದನ್ನು ನಿಲ್ಲಿಸಲಾಗಲಿಲ್ಲ. ಅರಬಿಂದೋರ ಗೆಳೆತನ ಭಾರತಿಯವರ ಕವನವಲ್ಲಿ ದಾರ್ಶನಿಕತೆಯ ಆಳವನ್ನು ಹೆಚ್ಚಿಸಿತು. ಭಾರತಿಯವರು ಬರೆದಿರುವ ಕೆಲವು ಶಕ್ತಿಯ ವಿಷಯದ ಕವನಗಳು, ಅವರ ಶಕ್ತಿಯನ್ನು ತಮ್ಮ ಮನಸ್ಸಿನಲ್ಲಿ ಎಷ್ಟು ಆಳವಾಗಿ ಅನುಭವಿಸಿದ್ದರು ಎನ್ನುವುದನ್ನು ತೋರಿಸುತ್ತವೆ. ಕೆಳಗಿನದು ಇದಕ್ಕೆ ಉದಾಹರಣೆ:

ಶಕ್ತಿ, ಶಕ್ತಿ, ಶಕ್ತಿ, ಶಕ್ತಿ, ಶಕ್ತಿ, ಮತ್ತು ಶಕ್ತಿ ಎಂದು ಹೇಳು ;
ಶಕ್ತಿ, ಶಕ್ತಿ, ಶಕ್ತಿ ಎಂದು ಹೇಳುವವರು
ಸಾಯುವುದಿಲ್ಲವೆಂದು ಹೇಳು.
ಶಕ್ತಿ, ಶಕ್ತಿ ಎಂದು ಹೇಳುವುದು ಮತ್ತು ಬದುಕುವುದು
ಒಳ್ಳೆಯದು.
ಶಕ್ತಿ, ಶಕ್ತಿ, ಎಂದೆ ಜೀವಿಸುವುದು ಒಳ್ಳೆಯದು
ಶಕ್ತಿ, ಶಕ್ತಿ ಎಂದವರು ಸೇರುವರು ಸಾಗದ ಸತ್ಯವನ್ನು
ಶಕ್ತಿ, ಶಕ್ತಿ ಎಂದರೆ ಶಕ್ತಿ ಬರುತ್ತದೆ ; ಕಾಣುತ್ತೀರಿ
ಶಕ್ತಿ, ಶಕ್ತಿ ಎಂದರೆ ಭಯ ಬರುತ್ತದೆ ; ಕಾಣುತ್ತೀರಿ
ಶಕ್ತಿ, ಶಕ್ತಿ ಎಂದು ಯಾವ ಕರ್ಮ ಮಾಡಿದರೂ
ಒಳ್ಳೆಯದಾಗುತ್ತದೆ
ಶಕ್ತಿ, ಶಕ್ತಿ ಎಂದರೆ ಅದು ಮುಕ್ತಿಗೆ ಬೇರಾಗುತ್ತದೆ
ಶಕ್ತಿ, ಶಕ್ತಿ, ಶಕ್ತಿ, ಶಕ್ತಿ, ಶಕ್ತಿ ಎಂದೇ ಆಡಬಹುದು
ಶಕ್ತಿ, ಶಕ್ತಿ, ಶಕ್ತಿ ಎಂದೆ ಹಾಡಬಹುದು.

....

ಈ ಸಮಯದಲ್ಲಿ ವಿ. ಒ. ಚಿದಂಬರಂ ಪಿಳ್ಳೈಯವರಿಗೆ ಜೈಲಿನಿಂದ ಬಿಡುಗಡೆ ಆಯಿತು. ಅವರು ಸುಬ್ರಮಣ್ಯಭಾರತಿಯವರನ್ನು ನೋಡಲು ಆರು ವರ್ಷ ಜೈಲು ವಾಸದ ನಂತರ ಬಂದರು.

ಎಲ್ಲಾ ಪತ್ರಿಕೆಗಳು ನಿಂತದ್ದರಿಂದ ಭಾರತಿ ಯಾವ ಪತ್ರಿಕೆಯಲ್ಲೂ ಬರೆಯಲಾಗಲಿಲ್ಲ. ಆದುದರಿಂದ ಶ್ರೀನಿವಾಸಾಚಾರಿಯವರು ಭಾರತಿಯವರನ್ನು ಟಾಗೂರರ ಕೆಲವು ಸಣ್ಣ ಕತೆಗಳನ್ನು ತಮಿಳಿಗೆ ಅನುವಾದಿಸುವಂತೆ ಮಾಡಿದರು. ಅವು ಸಣ್ಣ ಪುಸ್ತಕಗಳ

ರೂಪದಲ್ಲಿದ್ದವು. ವಿ. ವಿ. ಎಸ್. ಐಯ್ಯರರೂ ಸಹ ಟಾಗೋರರ ಕೆಲವು ಪದ್ಯಗಳನ್ನು ಅನುವಾದಿಸಿದರು.

ಬಡತನದೊಂದಿಗೆ ಬ್ರಿಟಿಷ್ ಭಾರತದ ಪೋಲೀಸ್ ಇಲಾಖೆಯು ಭಾರತಿಯವರಿಗೆ ಸಾಕಷ್ಟು ತೊಂದರೆ ಕೊಟ್ಟರು. ಗೂಢಚಾರರು ಭಾರತಿ ಮತ್ತು ಇತರ ರಾಷ್ಟ್ರೀಯತಾವಾದಿಗಳು ಎಲ್ಲಿ ಹೋದರಲ್ಲಿ ಹಿಂಬಾಲಿಸುತ್ತಿದ್ದರು. ಬ್ರಿಟಿಷ್ ಇಂಡಿಯಾವ ಗೂಢಚಾರರು ಹೇಗೆ ಭಾರತಿಯವರಿಗೆ ತೊಂದರೆ ಕೊಟ್ಟರೆನ್ನುವುದಕ್ಕೆ ಬೇಕಾದಷ್ಟು ಉದಾಹರಣೆಗಳಿವೆ. ಒಮ್ಮೆ ಭಾರತಿ ಮತ್ತು ಅವರ ಪತ್ನಿ ಮನೆಯಿಂದ ದೂರ ಇದ್ದರು. ಆಗ ಬ್ರಿಟಿಷ್ ಇಂಡಿಯಾದ ಪೋಲೀಸರು ಪಕ್ಕದ ಮನೆಯಿಂದ ಭಾರತಿಯವರ ಮನೆಯನ್ನು ಪ್ರವೇಶಿಸಿ ಅವರ ಪತ್ರಗಳು ಮತ್ತು ಅವರಿಗೆ ಸಂಬಂಧಿಸಿದ ವಸ್ತುಗಳನ್ನು ಶೋಧಿಸಿದರು. ಅವರು ಭಾರತಿಯವರ ಹಸ್ತಪ್ರತಿಗಳನ್ನೂ ಒಯ್ದರು. ಪೋಲೀಸರು ಹೋದ ನಂತರ ಭಾರತಿ ಮನೆಗೆ ಬಂದರು. ಕೆಲವು ಮುಖ್ಯವಾದ ಪತ್ರಗಳು ಇರಲಿಲ್ಲ. ಭಾರತಿಯವರು ತುಂಬ ಕೋಪಗೊಂಡರು. ಆಗ ಭಾರತಿಯವರು ಒಂದು ಸರ್ಕಾರ ಇಂತಹ ಸಣ್ಣ ಕೆಲಸಗಳನ್ನು ಮಾಡಿದರೆ ಈ ಪ್ರಪಂಚದಲ್ಲಿ ನಾಗರಿಕರು ಹೇಗೆ ಬದುಕುವುದು ಎಂದರು.

ಕೆಲವು ಸಲ ಗೂಢಚಾರರು ಭಾರತಿಯವರ ಮನೆಗೆ ಬಂದು ಅವರ ಮನೆಯಲ್ಲಿ ಕೆಲಸ ಕೇಳಿದರು. ಮತ್ತೊಮ್ಮೆ ಒಬ್ಬ ಪೋಲೀಸ್ ಗೂಢಚಾರ ಒಬ್ಬ ಸ್ವಾಮೀಜಿ ವೇಷದಲ್ಲಿ ಬಂದ. ಭಾರತಿ ತಕ್ಷಣ ಆ ವ್ಯಕ್ತಿ ಗೂಢಚಾರ ಎಂದು ಕಂಡುಕೊಂಡರು. ಇದನ್ನು ತಿಳಿದ ಪೋಲೀಸ್ ಗೂಢಚಾರ ಆ ಸ್ಥಳದಿಂದ ಹೊರಟ.

ಪಾಂಡಿಚೇರಿಯಲ್ಲಿ ರಾಷ್ಟ್ರೀಯತಾವಾದಿಗಳು ಬದುಕುತ್ತಿದ್ದದ್ದು ಇಂತಹ ವಾತಾವರಣದಲ್ಲಿ. ಒಂದು ಕಷ್ಟದ ದಿನ ಭಾರತಿ ಉತ್ತರ ಪಾಂಡಿಚೆರಿಗೆ ಹೋದರು. ಮುತ್ಯಾಲಪಟ್ಟೈಗೆ ಒಂದು ಕಿಲೋ

ಮೀಟರು ದೂರ. ಅಲ್ಲಿ ಭಾರತಿಯವರು ಅನೇಕ ಮರಗಳಿರುವ ಒಂದು ದೊಡ್ಡ ತೋಟವನ್ನು ಕಂಡರು. ಭಾರತಿ ನೇರವಾಗಿ ತೋಟದೊಳಗೆ ಹೋಗಿ ಒಂದು ಮರದಡಿ ಕುಳಿತರು. ಆ ಸ್ಥಳದ ನೈಸರ್ಗಿಕ ಸೌಂದರ್ಯವನ್ನು ಮೆಚ್ಚಿದರು ಆದುದರಿಂದ ಮರುದಿನವೂ ಅವರು ಅಲ್ಲಿಗೆ ಹೋದರು. ಒಂದು ಮರದಡಿ ಮಲಗಿ ಮರಗಳ ಸೌಂದರ್ಯ ವನ್ನು ಆನಂದಿಸಿದರು. ಅಲ್ಲಿ ಭಾರತಿ "ಕುಯಿಲ್ ಪಾಟ್ಟು" ಎನ್ನುವ ಕವನ ಬರೆದರು. ಈ ಕವನ ಸುಬ್ರಮಣ್ಯಭಾರತಿಯವರ ಅತಿ ಮುಖ್ಯ ಕವನ.

"ಕುಯಿಲ್ ಪಾಟ್ಟು"ವಿನಲ್ಲಿ ಭಾರತಿ ಪ್ರಕೃತಿಯ ಅತಿ ಆಕರ್ಷಣೆಯ ವಿವರವನ್ನು ನೀಡಿದ್ದಾರೆ. ಅವರು ಒಂದು ಕೋಗಿಲೆ ಯನ್ನು ಚಿತ್ರಿಸಿದ್ದಾರೆ. ಕೋಗಿಲೆ ಒಂದು ಕೋತಿ ಮತ್ತು ಎತ್ತಿ ನೊಂದಿಗೆ ಪ್ರೀತಿಯನ್ನು ಹೊಂದಿರುತ್ತದೆ. ಕವನದ ಕೊನೆಯಲ್ಲಿ ಭಾರತಿ ಹೇಳುತ್ತಾರೆ ಈ ಕವನವನ್ನು ದಾರ್ಶನಿಕ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಬೇಕೆಂದು. ಅವರು ಹೇಳುತ್ತಾರೆ :

"ಓ ತಮಿಳು ಪಂಡಿತರೆ, ಈ ಕವನ
ಒಂದು ಕಲ್ಪನೆ ; ಆದರೂ ನೀವು
ವಿಭಿನ್ನ ರೀತಿಯಲ್ಲಿ ಅರ್ಥವನ್ನು ನೋಡಬಹುದು ;
ನೀವು ಹೇಳಬಲ್ಲಿರಾ ನನಗೆ, ಈ ಕವನವನ್ನು
ವೇದಾಂತದ ಹಾದಿಯಲ್ಲಿ ಅರ್ಥೈಸಲು ಸಾಧ್ಯವೆಂದು"

ಇದೊಂದು ಅತಿ ಭಿನ್ನ ರೀತಿಯ ಕವನ. ಸುಬ್ರಮಣ್ಯಭಾರತಿಯವರ ವಿಮರ್ಶಕರು ಈ ಕವನ ಅತಿ ಮುಖ್ಯವಾದುದೆಂದು ಪರಿಗಣಿಸಿದ್ದಾರೆ. ಈ ಶೈಲಿಯಲ್ಲಿ ಭಾರತಿ ಹೆಚ್ಚು ಕವನಗಳನ್ನು ಬರೆದಿಲ್ಲ. ಮೇಲ್ನೋಟಕ್ಕೆ ಈ ಕವನ ತುಂಬಾ ಸಾಧಾರಣವಾಗಿ ಕಂಡರೂ ಅದರ ಒಳಹಂತದಲ್ಲಿ

ಅದು ಪ್ರಮುಖವಾಗುತ್ತದೆ. ಅನೇಕ ವಿಮರ್ಶಕರು ಅನೇಕ ರೀತಿಯ ವಿವರಣೆಯನ್ನು ಈ ಕವನಕ್ಕೆ ನೀಡಿದ್ದಾರೆ. ಆದರೂ ಭಾರತಿಯವರು ಬ್ರಿಟಿಷ್ ಪೋಲೀಸರ ಅನುಮಾನಾಸ್ಪದ ಕಣ್ಣುಗಳಡಿ ಅತ್ಯಂತ ಕಷ್ಟಕರ ಬದುಕನ್ನು ನಡೆಸುತ್ತಿದ್ದರೂ ಕಾವ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ಸೃಜನಶೀಲರಾಗಿದ್ದರು.

ಮುತ್ತ್ಯಾಲಪಟ್ಟೈಗೆ ಹೋಗಿ "ಕುಯಿಲ್ ಪಾಟ್ಟು" ಕವನ ಬರೆದ ಈ ಘಟನೆ ಸಂಭವಿಸಿದ್ದು ೧೯೧೨ರಲ್ಲಿ ಎಂದು ಹೇಳುತ್ತಾರೆ.

ಆದರೆ ಅದಕ್ಕೂ ಮೊದಲು ೧೯೧೧ರಲ್ಲಿ ಮತ್ತೊಂದು ಮುಖ್ಯ ಸಂಗತಿ ನಡೆಯಿತು. ಪಾಂಡಿಚೆರಿಯಲ್ಲಿ ಅರಬಿಂದೋ ಮತ್ತು ವಿ. ವಿ. ಎಸ್. ಐಯ್ಯರ್‌ರನ್ನು ಭೇಟಿಮಾಡಿ ಮಾತಾಡುತ್ತಿದ್ದ ಯುವಕ ಗುಟ್ಟಾಗಿ ಆಶ್ ಎನ್ನುವ ಬ್ರಿಟಿಷ್ ಕಲೆಕ್ಟರನನ್ನು ಗುಂಡಿಟ್ಟು ಕೊಂದ. ಆಶ್ ಸ್ಥಳದಲ್ಲೇ ಮೃತಪಟ್ಟ ಮತ್ತು ವಾಂಚಿನಾಥನ್ ಎನ್ನುವ ಆ ಯುವಕ ತನ್ನನ್ನೂ ಕೊಂದುಕೊಂಡ. ಈ ಘಟನೆ ದೇಶದ ತುಂಬಾ ಬಿಸಿ ಅಲೆಗಳನ್ನು ಎಬ್ಬಿಸಿತು. ಎಲ್ಲ ಕಡೆಯಲ್ಲೂ ಪೋಲೀಸರಿದ್ದರು. ತಿರುನಲ್ವೇಲಿಯ ಪಟ್ಟಣಗಳು ಮತ್ತು ಗ್ರಾಮಗಳು ಪೋಲೀಸರ ಶೋಧನೆಗೆ ಒಳಗಾದವು. ಬಹಳ ಜನ ದಸ್ತಗಿರಿಯಾದರು. ಮತ್ತು ಅನೇಕರನ್ನು ಪ್ರಶ್ನಿಸಿ ಹಿಂಸಿಸಲಾಯಿತು. ಆ ಸಮಯದಲ್ಲಿ ಭಾರತಿಯವರ ಪತ್ನಿ ಚೆಲ್ಲಮ್ಮಾಳ್ ಅವರು ತವರೂರಾದ ಕಡಯುಮ್‌ನಲ್ಲಿದ್ದರು. ಪೋಲೀಸರು ಮನೆಯನ್ನು ಶೋಧಿಸುತ್ತಾ ಆಕೆಯ ಮನೆಯ ಮುಂದೆ ಬೀಡುಬಿಟ್ಟಿದ್ದರು. ಆಶ್‌ನ ಸಾವಿನ ನಂತರ ಒಂದು ವಾರದೊಳಗೆ ಚೆಲ್ಲಮ್ಮಾಳ್‌ರನ್ನು ಪಾಂಡಿಚೆರಿಗೆ ತರಲಾಯಿತು. ಅದನ್ನು ಭಾರತಿಯವರು ಏರ್ಪಡಿಸಿದ್ದರು. ಆಗ ಪೋಲೀಸರು ತಮಿಳುನಾಡಿನ ಎಲ್ಲ ರಾಷ್ಟ್ರೀಯತಾವಾದಿಗಳನ್ನು ಅನುಮಾನಿಸಿದರು. ಚೆಲ್ಲಮ್ಮಾಳ್‌ರ ಹಿರಿಯ ಸೋದರ ರಂಗೂನ್‌ನಲ್ಲಿದ್ದವರು ಕಡಯುಮ್‌ಗೆ ಬಂದರು. ಅವರನ್ನೂ ದಸ್ತಗಿರಿ ಮಾಡಲಾಯಿತು. ಪೋಲೀಸರು ಭಾರತಿ,

ವಿ. ವಿ. ಎಸ್. ಐಯ್ಯರ್ ಮತ್ತು ಅರಬಿಂದೋರನ್ನು ಅನುಮಾನಿಸಿದರು. ಇವರು ಆಶ್‌ನ ಕೊಲೆಯ ಸಂಚಿನಲ್ಲಿ ಸೇರಿದ್ದಾರೆಂದು ಪೋಲೀಸರು ತಿಳಿದಿದ್ದರು.

೧೯೧೨ರಲ್ಲಿ ಭಾರತಿಯವರ ಮತ್ತೊಂದು ಮುಖ್ಯ ಕವನ "ಪಾಂಚಾಲಿ ಶಪಥಂ" ಪ್ರಕಟವಾಯಿತು. ಭಾರತಿ ಮಹಾಭಾರತದ ಕಥೆಯನ್ನು ಮತ್ತೆ ಬರೆದರು. ಭಾರತದ ವಿವಿಧ ಭಾಷೆಗಳಲ್ಲಿನ ಅನೇಕ ಕವಿಗಳು ಮಹಾಭಾರತದ ಕಥೆಯನ್ನು ಉಪಯೋಗಿಸಿಕೊಂಡಿದ್ದಾರೆಂದು ನಮಗೆ ಗೊತ್ತಿದೆ. ಅದೇ ರೀತಿ ಭಾರತಿಯವರೂ ಸಹ ಮಹಾಭಾರತ ಕಥೆಯನ್ನು ಕಾವ್ಯದಲ್ಲಿ ಬರೆದರು. ಈ ಕಾವ್ಯ ಬರೆಯಲು ಭಾರತಿ ದುಶ್ಶಾಸನನಿಂದ ದ್ರೌಪದಿ ವಸ್ತ್ರಾಪರಣಕ್ಕೊಳಗಾದ ಪ್ರಸಂಗವನ್ನು ಆಯ್ಕೆ ಮಾಡಿಕೊಂಡರು. ಈ ಘಟನೆಯನ್ನು ಭಾರತಿ ತಮ್ಮ ಕವನದಲ್ಲಿ ಪ್ರಮುಖವಾಗಿ ಉಪಯೋಗಿಸಿಕೊಂಡರು. ಆದುದರಿಂದ ಅವರ ಕವನವನ್ನು "ಪಾಂಚಾಲಿ ಶಪಥಂ" ಎಂದು ಕರೆಯಲಾಯಿತು. ಮಹಾಭಾರತ ಕಥೆಯ ಇತರ ಎಲ್ಲಾ ಕತೆಗಳೂ ಬಿಟ್ಟುಹೋದವು.

ಈ ಕವನದಲ್ಲಿ ಭಾರತಿ ದ್ರೌಪದಿಯನ್ನು ಭಾರತಮಾತೆಗೆ ಹೋಲಿಸಿದ್ದಾರೆ. ಭಾರತಮಾತೆಯ ವಸ್ತ್ರಾಪಹರಣವಾಗುವಾಗ ಜನ ಈ ದೃಶ್ಯವನ್ನು ನೋಡುತ್ತಿದ್ದರು. ಆದುದರಿಂದ ಭಾರತಿ ದ್ರೌಪದಿಯ ಕತೆಯನ್ನು ಜನರು ರಾಷ್ಟ್ರೀಯತಾ ಆಸಕ್ತಿಯನ್ನು ಎಚ್ಚರಗೊಳಿಸಲು ಉಪಯೋಗಿಸಿದರು. ಆಧುನಿಕ ಕಾವ್ಯದಲ್ಲಿ ಬರೆದ ದ್ರೌಪದಿಯ ಪ್ರಾಚೀನ ಕತೆಯೂ ಅತ್ಯಂತ ಕ್ರಾಂತಿಕಾರಿಯದು. ಈ ಕಾವ್ಯದ ಕಲಾತ್ಮಕ ಜಯ ಭಾರತಿಯವರ ಬರಹದ ಪದ್ಧತಿಯಲ್ಲಿ ಕಾಣಬಹುದು. ಯಾವ ಓದುಗನಿಗೂ ಇದು ರಾಷ್ಟ್ರೀಯತಾ ಉದ್ದೇಶದ ವಿಚಾರಗಳನ್ನು ಪ್ರಚಾರ ಮಾಡಲು ಬರೆದಿದ್ದಾರೆಂದು ಅರ್ಥವಾಗುವುದಿಲ್ಲ. ಈ ಕವನದಲ್ಲಿ ರಾಷ್ಟ್ರೀಯತೆಯ ಸಂದೇಶ ಅಷ್ಟು ಸೂಕ್ಷ್ಮವಾಗಿ ಕಾಣುತ್ತದೆ. ಈ ಕವನವು ಕಲಾವಂತಿಕೆಯ ಜಯ. ಆದುದರಿಂದ

ಈ ಕಾವ್ಯವನ್ನು ಭಾರತಿಯವರ ಅತ್ಯುತ್ತಮ ಕೃತಿಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ.

ಈ ಕಾಲಾವಧಿಯಲ್ಲಿ ಭಾರತಿಯವರು ಬಡತನದಿಂದ ಅತೀವವಾಗಿ ನರಳುತ್ತಿದ್ದರು. ಭಾರತಿಯವರು ಊಟಮಾಡಲು ಎಂದೂ ಹೋಟೆಲ್‌ಗೆ ಹೋದವರಲ್ಲ. ಆಹಾರ ಇಲ್ಲದಾಗ, ಭಾರತಿ ೪ ಆಣೆಗೆ ಬಾಳೆಹಣ್ಣು ಕೊಂಡು ಎಲ್ಲರಿಗೂ ಕೊಡುತ್ತಿದ್ದರು. ಹಾಲಿನವರು ಭಾರತಿ ಮತ್ತು ಅವರ ಕುಟುಂಬಕ್ಕೆ ಹಾಲನ್ನು ಸಾಲ ನೀಡುತ್ತಿದ್ದರು. ಚೆಲ್ಲಮ್ಮಾಳ್‌ಭಾರತಿ ಅವರು, ಭಾರತಿಯವರ ಜೀವನ ಚರಿತ್ರೆಯಲ್ಲಿ--ಆ ದಿನಗಳಲ್ಲಿ ಇಡೀ ಕುಟುಂಬ ಮಕ್ಕಳೊಂದಿಗೆ ಹಾಲು ಕುಡಿದು, ಯಾವುದೇ ಆಹಾರ ಇಲ್ಲದೆ ಇರುತ್ತಿತ್ತು ಎಂದು ಬರೆಯುತ್ತಾರೆ. ಅವರು ಊಟಮಾಡಲಿಲ್ಲವೆಂದು ಯಾರಾದರೂ ಹೇಳುವುದನ್ನು ಕೇಳಲು ಭಾರತಿ ಇಚ್ಛಿಸುತ್ತಿರಲಿಲ್ಲ.

ಒಮ್ಮೆ ಭಾರತಿಯವರನ್ನು ನೋಡಲು ಮದ್ರಾಸಿನಿಂದ ಅವರ ಗೆಳೆಯರೊಬ್ಬರು ಬಂದರು. ಆಗ ಭಾರತಿಯವರ ಮನೆಯಲ್ಲಿ ಬಡತನವಿತ್ತು. ಗೆಳೆಯನಿಗೆ ಪರಿಸ್ಥಿತಿ ತಕ್ಷಣ ಅರಿವಾಯಿತು. ಅವರು ಭಾರತಿಯವರನ್ನು "ನೀವು ಕೊನೆಪಕ್ಷ ಆಹಾರ ಪಡೆಯಲು ಏನು ಮಾಡುತ್ತಿದ್ದೀರಿ" ಎಂದು ಕೇಳಿದರು. "ನಾಲ್ಕು ಕಡೆ ಪೋಲೀಸರಿಂದ ಆವರಿಸಲ್ಪಟ್ಟಿದ್ದೀರಿ. ನಿಮ್ಮ ಪತ್ರಿಕೆಗಳನ್ನು ಪೋಲೀಸರು ಪರೀಕ್ಷಿಸುತ್ತಾರೆ ಆದ್ದರಿಂದ ಹೊರಗಿನಿಂದ ನೀವು ಹಣ ಪಡೆಯಲು ಆಗುವುದಿಲ್ಲ, ಹಾಗೇನಾದರೂ ಹಣ ಕಳಿಸಿದವರೂ ಅವರನ್ನು ಪೋಲೀಸರು ಪ್ರಶ್ನಿಸುತ್ತಾರೆ. ನಿಮ್ಮ ಗೆಳೆಯರು ನಿಮ್ಮ ಮನೆಗೆ ಬರಲು ಹೆದರುತ್ತಾರೆ. ಯಾರಾದರೂ ಬಂದರೂ ಅವರು ಶಿಕ್ಷಿಸಲ್ಪಡುತ್ತಾರೆ. ಎಂತಹ

ದಾರುಣ ಸನ್ನಿವೇಶ! ಆದರೆ ನೀವು ಅಷ್ಟೊಂದು ಸಂತೋಷದಿಂದಿರು ವಂತೆ ಕಾಣುತ್ತದೆ. ಇದು ಹೇಗೆ ಸಾಧ್ಯ?"

ಗೆಳೆಯರಿಗೆ ಭಾರತಿ ಹೀಗೆ ಉತ್ತರಿಸಿದರು: "ನಾನು ನನ್ನ ಕರ್ತವ್ಯವನ್ನು ಮಾಡುತ್ತಿದ್ದೇನೆ, ಆದ್ದರಿಂದ ಮನ ತುಂಬಿದೆ. ನನ್ನ ಕೀರ್ತಿಯ ಮೇಲೆ ನನ್ನ ಕುಟುಂಬ ಉಣ್ಣಲ್ಪಡುತ್ತದೆ." ಈ ಉತ್ತರ ತೊಂದರೆಗೊಳಗಾದ ಕಾಲದಲ್ಲಿದ್ದ ಭಾರತಿಯವರ ಸ್ಫೂರ್ತಿಯನ್ನು ತೋರಿಸುತ್ತದೆ.

ನಂತರ ೧೯೧೭ನೇ ಇಸವಿಯಲ್ಲಿ ಭಾರತಿಯವರ ಅಭಿಮಾನಿಯೊಬ್ಬರು "ಕಣ್ಣನ್ ಪಾಟ್ಟು" ಎಂಬ ಕವನ ಸಂಗ್ರಹವನ್ನು ಪ್ರಕಟಿಸಿದರು. ಇದೂ ಸಹ ಭಾರತಿಯವರಿಂದ ರಚಿತವಾದ ಇನ್ನೊಂದು ಮುಖ್ಯ ಸಂಗ್ರಹ. ಈ ಸಂಗ್ರಹದಲ್ಲಿ ಸುಬ್ರಮಣ್ಯಭಾರತಿ ಕೃಷ್ಣನ ವಿವಿಧ ರೂಪಗಳ ಬಗ್ಗೆ ಹಾಡುತ್ತಾರೆ. ಪುರಾತನ ತಮಿಳು ಕವಿಗಳಿಂದ ದೇವರು ಹಲವು ಬಗೆಗಳಲ್ಲಿ ಸ್ತುತಿಸಲ್ಪಟ್ಟಿದ್ದಾನೆ. "ಪಿಳ್ಳೈತ್ತಮಿಳ್" (ಇದು ಒಂದು ಸಾಹಿತ್ಯ ಪ್ರಕಾರ)ನಲ್ಲಿ ದೇವರು ವಿವಿಧ ಘಟ್ಟಗಳಲ್ಲಿ ಕಲ್ಪನೆಗೊಂಡು ಹಾಡಲ್ಪಟ್ಟಿದ್ದಾನೆ. ಉದಾಹರಣೆಗೆ ಪುರಾತನ ತಮಿಳು ಕವಿಗಳು, ಶ್ರೀ ಕೃಷ್ಣನ ವಿವಿಧ ವಯಸ್ಸಿನ ಲೀಲೆಗಳನ್ನು ಕುರಿತು ಹಾಡಿದರು. ಅವನ ಶೈಶವದ ಮೇಲೆ ಹತ್ತು ಪದ್ಯಗಳು, ಅವನ ಹದಿವಯಸ್ಸನ್ನು ಮನಸ್ಸಿಗೆ ತರುವ ಘಟನೆಗಳ ಮೇಲೆ ಹತ್ತು ಪದ್ಯಗಳು—ಈ ರೀತಿ. ಆದರೆ ಇಲ್ಲಿ ಭಾರತಿ ಕೃಷ್ಣನನ್ನು ಕುರಿತು ಗೆಳೆಯನಂತೆ, ಸೇವಕನಂತೆ, ಪ್ರೇಮಿಯಂತೆ, ರಾಜನಂತೆ, ಶಿಷ್ಯನಂತೆ, ಗುರುವಿನಂತೆ, ಶಿಶುವಿನಂತೆ ಭಾವಿಸಿಕೊಂಡು ಬರೆಯುತ್ತಾರೆ. ಹಾಗೇ ಶ್ರೀ ಕೃಷ್ಣನನ್ನು ಮನೆದೇವರಂತೆ ಭಾವಿಸಿಯೂ ಹಾಡುತ್ತಾರೆ. ದೇವರನ್ನು ಕುರಿತು ಇಷ್ಟು ವೈವಿಧ್ಯಮಯವಾಗಿ ಚಿಂತಿಸುವ ಪರಿ ತಮಿಳು ಸಂಪ್ರದಾಯಕ್ಕೆ ಹೊಸದು. ಹಲವಾರು ಆಧುನಿಕ ವಿಮರ್ಶಕರು, ದೇವರನ್ನು—ಒಡೆಯ ಹಾಗೂ ಸೇವಕ, ಸೇವಕ ಹಾಗೂ

ಗುರು–ಈ ರೀತಿಯಾಗಿ ಪರಿಭಾವಿಸುವುದರ ಒಳಸತ್ಯವನ್ನು ಶೋಧಿಸಿ ಹೊರಗೆಡವಲು ಪ್ರಯತ್ನಿಸುತ್ತಿದ್ದಾರೆ. ಭಾರತಿಯವರು 'ಕಣ್ಣ–ನನ್ನ ಆಟದ ಗೆಳೆಯ" ಎಂಬ ಶೀರ್ಷಿಕೆಯಡಿ ಬರೆದಿರುವ ಕವಿತೆಯ ಸಾರಾಂಶ ಹೀಗಿದೆ :

ಅವನು ನಮ್ಮ ದಣಿಯದ ಆಟದ ಗೆಳೆಯ
ಕಣ್ಣನಿಂದಾಗಿ–ಅವನಿಲ್ಲಿಗೆ ಬಂದರೆ–
ಬೀದಿಯ ಹುಡುಗಿಯರಿಗೆ ತಪ್ಪಿದ್ದಲ್ಲ ತೊಂದರೆ.

ತಿನಲೆಂದು ಸವಿ ಹಣ್ಣುಗಳ ತರುವನು
ನೆಚ್ಚಿ ತಿನ್ನುವಾಗ ಕಸಿದುಬಿಡುವನು
"ಏಕೆ ಹೀಗೆ ಮಾಡುವೆ ?" ನಮ್ಮ ಪ್ರಶ್ನೆ ಅವನ ಕುರಿತು,
ತಿರುಗಿ ಕೊಡುವ ಫಲವ, ಕಾಣುವುದು ಹಲ್ಲಿನ ಗುರುತು.

ತರುವನವನು ತಿನಿಸನು, ರುಚಿಯು ಸವಿಯು ಜೇನು.
ಯಾರಿಗೂ ದೊರೆಯದಂತೆ ಎತ್ತರವಲ್ಲಿ ಇಡುವನು.
ನಮ್ಮ ಮನವ ಮುದಗೊಳಿಸುವನಾ ಅವನು.
ಸಂತಸದಲಿ ಮುಳುಗಿದಾಗ ಉಗುರಿನಲ್ಲಿ ಚುಚ್ಚುವನು.

ತರುವನವನು ನಮಗೆಂದು ಸುಂದರ ಪುಷ್ಪಗಳ
ಹಾಗೆಯೇ ಹೇಳುವ ಮುಚ್ಚಿಕೊಳಲು ಕಣ್ಗಳ
ಮುಚ್ಚಿಕೊಳ್ಳಲು ನಾವು ನಮ್ಮ ಕಣ್ಣುಗಳ
ಅಲಂಕರಿಸುವುದು ಪುಷ್ಪ ಮತ್ತೊಬ್ಬಳ ಹೆರಳ.

ಇದು ಭಾರತಿಯವರ 'ಕಣ್ಣನ್ ಪಾಟ್ಟು'ವಿನ ಒಂದು ಉದಾಹರಣೆ.

ಭಾರತಿಯವರ ಪಾಂಡಿಚೆರಿ ಜೀವನ, ಆಗಾಗ್ಗೆ ಊಟವಿಲ್ಲದೆ ಮಲಗಬೇಕಾದಷ್ಟು ದುಃಖಮಯವಾಗಿದ್ದರೂ ಸಹ, ಅವರು ಇತರರಿಗಿಂತ ಭಿನ್ನವಾಗಿದ್ದರು ಎಂಬುದಕ್ಕೆ ಹಲವಾರು ನಿದರ್ಶನಗಳು ದೊರೆಯುತ್ತವೆ. ಒಮ್ಮೆ ಭಾರತಿಯವರ ಬಳಿ ಹಣವಿತ್ತು. ಆಗ ಅವರಿಗೆ ಮದುವೆಯ ಸಮಯದಲ್ಲಿ ಹೊಲಿಸಿಕೊಳ್ಳುವಂತಹ ಭರ್ಜರಿ ಕೋಟೊಂದನ್ನು ಹೊಲಿಸಿಕೊಳ್ಳಬೇಕೆಂದು ಅನಿಸಿತು. ಉತ್ತಮ ದರ್ಜಿಯೊಬ್ಬನನ್ನು ಕರೆದು, ತಮಗನ್ನಿಸಿದ ಎಲ್ಲ ಸೂಚನೆಗಳನ್ನು ಕೊಟ್ಟರು. ಸ್ವಲ್ಪ ದಿನಗಳ ನಂತರ ದರ್ಜಿ ಬಂದು ಸಿದ್ಧವಾದ ಕೋಟನ್ನು ಅವರಿಗೆ ನೀಡಿದ. ಭಾರತಿ ಅದನ್ನು ಧರಿಸಿ ಹೊರಗಡೆ ಹೋದರು. ಆದರೆ ಅವರಿಗೆ "ಈ ಕೋಟು ನನ್ನ ಸೂಚನೆಗಳಂತೆ ಹೊಲಿಯಲ್ಪಟ್ಟಿಲ್ಲ" ಎನ್ನಿಸಿತು. ಸುತ್ತಲಿನ ಜನರೆಲ್ಲ ತಮ್ಮತ್ತ ಮೋಜಿನಿಂದ ನೋಡುತ್ತಿದ್ದಾರೆ ಎಂದು ಅವರಿಗೆ ಅನ್ನಿಸಿಬಿಟ್ಟಿತು. ಸ್ವಲ್ಪವೇ ಸಮಯದ ನಂತರ ಅವರು ಮನೆಗೆ ಹಿಂತಿರುಗಿದರು. ಹಿಂತಿರುಗಿದ ಅವರನ್ನು ಕಂಡ ಪತ್ನಿ ಚೆಲ್ಲಮ್ಮಾಳ್ ಆಶ್ಚರ್ಯದಿಂದ ನೋಡಿದರು. ಭಾರತಿಯವರ ದೇಹದ ಮೇಲೆ ಅವರ ಹೊಸ ಕೋಟು ಇರಲಿಲ್ಲ. ಅಂತಹ ಬೆಲೆಬಾಳುವ ಕೋಟು ಏನಾಯಿತು ? ಎಂದು ಚೆಲ್ಲಮ್ಮಾಳ್ ಪತಿಯನ್ನು ಕೇಳಿದರು. ಭಾರತಿಯವರ ಉತ್ತರ (ಕಡುಬಡತನವನ್ನು ಅನುಭವಿಸಿದ್ದ) ಚೆಲ್ಲಮ್ಮಾಳ್‌ಗೆ ಆಘಾತ ತಂದಿತು–"ನಾನು ಅದನ್ನು ಒಬ್ಬ ಕೈಗಾಡಿಯವನಿಗೆ ಕೊಟ್ಟುಬಿಟ್ಟೆ."

ಅಂದಿನ ಪಾಂಡಿಚೆರಿಯಲ್ಲಿ ಕೈಗಾಡಿಗಳಿದ್ದವು. ಇವುಗಳನ್ನು ತಳ್ಳುತ್ತಿದ್ದವರು ಬಹುಪಾಲು ಜನ ಹರಿಜನರು. ಭಾರತಿ ಈ ಜನರ ಸ್ನೇಹಿತರಾಗಿದ್ದರು. ಸಾಮಾನ್ಯವಾಗಿ ಈ ಕೈಗಾಡಿಗಳನ್ನು ಹಿಂದಿನಿಂದ ತಳ್ಳುತ್ತಿದ್ದರು. ಪ್ರಯಾಣಿಕನ ಕೈಯಲ್ಲಿ ತಿರುಗಣೆ ಚಕ್ರ (steering wheel) ಇರುತ್ತಿತ್ತು. (ಅವನು ಗಾಡಿಯ ಒಳಗಡೆ ಕುಳಿತಿರುತ್ತಿದ್ದ). ಭಾರತಿಯವರು ಅತ್ಯುತ್ತಮವಾಗಿ ತಿರುಗಣೆ ಚಕ್ರವನ್ನು ನಿಭಾಯಿಸು

ತ್ತಿದ್ದರು. ಒಮ್ಮೆ ಅವರು ತಮ್ಮ ಕೈಗಾಡಿಯ ಪ್ರಯಾಣ ಮುಗಿಸಿ, ಗಾಡಿಯವನಿಗೆ ಹಣ ಕೊಡಲು ಹೋದರೆ ಅವನು ನಿರಾಕರಿಸಿದ. ಅವನ ಉದ್ದೇಶವನ್ನರಿತ ಭಾರತಿ ಅವನಿಗೆ ತಮ್ಮ 'ಅಂಗವಸ್ತ್ರ'ವನ್ನು ನೀಡಿದರು. ಗಾಡಿಯವನು ತುಂಬ ಸಂತೋಷಪಟ್ಟ. ಸುಬ್ರಮಣ್ಯಭಾರತಿಯವರ ಪಾಂಡಿಚೆರಿ ಜೀವನದಲ್ಲಿ ಇಂತಹ ಹಲವಾರು ಘಟನೆಗಳನ್ನು ಕಾಣಬಹುದು.

ಭಾರತಿ ತಮ್ಮ ಮುಗ್ಧತೆಗೆ ಹೆಸರಾಗಿದ್ದರು. ಒಂದು ದಿನ ಅವರು ಒಬ್ಬ ವ್ಯಕ್ತಿಯ ಜೊತೆ ಹೊರಗಡೆ ಹೋದರು. ಅವರಿಬ್ಬರ ಅಸಹಜ ನಡತೆ ಚೆಲ್ಲಮ್ಮಾಳ್ ಮನಸ್ಸಿನಲ್ಲಿ ಸಂಶಯದ ಅಲೆಗಳನ್ನು ಎಬ್ಬಿಸಿದವು. ಆದ್ದರಿಂದ ಆಕೆ ಆ ಸಂಜೆ ಭಾರತಿಯವರ ಹಿಂದಿರುಗುವಿಕೆ ಯನ್ನು ಕಾತರದಿಂದ ಕಾಯುತ್ತಿದ್ದರು. ಆದರೆ ರಾತ್ರಿ ಹನ್ನೊಂದಾ ದರೂ ಭಾರತಿ ವಾಪಸ್ಸು ಬರಲಿಲ್ಲ. ಚೆಲ್ಲಮ್ಮಾಳ್ ಭಯಗ್ರಸ್ತ ರಾದರು. ಭಾರತಿಯವರು ಹೊರಗಡೆ ಹೋದಾಗ ಅವರೊಡನೆ ಇದ್ದ ವ್ಯಕ್ತಿಯ ಬಗ್ಗೆ ಆಕೆ ಹೇಳಲು ತೊಡಗಿದಾಗ ಜನ ಜಮಾಯಿ ಸಿದರು; ಅವರೆಲ್ಲ ಭಾರತಿಯವರನ್ನು ಬಯ್ಯಲು ಮೊದಲು ಮಾಡಿದರು. ಭಾರತಿಯವರೊಡನೆ ಆ ದಿನ ಇದ್ದ ವ್ಯಕ್ತಿ ಒಬ್ಬ ಆಂಗ್ಲ ಪೋಲೀಸಿನ ಏಜೆಂಟನಾಗಿದ್ದ (Police Agent). ಅವನು ಭಾರತಿಯವರಿಗೆ ಅವರ ಮೇಲಿನ ಅರೆಸ್ಟ್ ವಾರಂಟ್ ಅನ್ನು ತೆಗೆದು ಹಾಕಲಾಗಿದೆ ಎಂದು ಹೇಳಿ ಅವರನ್ನು ಮದರಾಸಿಗೆ, ಎಂದರೆ ಬ್ರಿಟಿಷ್ ಇಂಡಿಯಾಗೆ ಕರೆದ. ಭಾರತಿ ಅವನನ್ನು ನಂಬಿ, ಅವನೊಡನೆ ಮದರಾಸಿನ ಪ್ರಯಾಣಕ್ಕೂ ಸನ್ನದ್ಧರಾದರು. ಅದೃಷ್ಟವಶಾತ್ ಭಾರತಿಯವರ ಮೇಲಿನ ಅರೆಸ್ಟ್ ವಾರಂಟ್ ಇನ್ನೂ ಜಾರಿಯಲ್ಲಿರು ವುದನ್ನು ಅರಿತಿದ್ದ ವಕೀಲರೊಬ್ಬರು, ಅವರಿಗೆ ಸಿಕ್ಕಿ ಅವರು ಪಾಂಡಿಚೆರಿಗೆ ಮಾರನೆಯ ದಿನ ಬೆಳಿಗ್ಗೆ ಸುಮಾರು ಹನ್ನೊಂದು ಘಂಟೆಗೆ ಹಿಂದಿರುಗಿದರು.

ಎರಡು ದಿನಗಳ ನಂತರ, ಭಾರತಿಯುವರನ್ನು ಮದರಾಸಿಗೆ ಕರೆದೊಯ್ಯಲು ಯತ್ನಿಸಿದ್ದ ವ್ಯಕ್ತಿ ಅವರಲ್ಲಿಗೆ ಬಂದ. ಭಾರತಿ ಅವನನ್ನು ಸಹಜತೆಯಿಂದ ಸ್ವಾಗತಿಸಿ ಅವನೊಂದಿಗೆ ಮಾತುಕತೆ ಆಡಿದರು. ಅವನೊಂದಿಗೆ ಅವರು ಕೋಪವನ್ನು ಎಷ್ಟುಮಾತ್ರವೂ ವ್ಯಕ್ತಪಡಿಸಲಿಲ್ಲ. ಆದರೆ ಚೆಲ್ಲಮ್ಮಾಳ್‌ಗೆ ತನ್ನ ಪಶಿಯಂತೆ ನಡೆಯಲು ಸಾಧ್ಯವಾಗಲಿಲ್ಲ. ಆಕೆ ಆ ವ್ಯಕ್ತಿಯ ಮೇಲೆ ತನಗಿದ್ದ ಕೋಪವನ್ನು ಪ್ರದರ್ಶಿಸಿಯೇಬಿಟ್ಟಳು. ಆ ಸಮಯದಲ್ಲಿ ಭಾರತಿ ಒಂದು ಹಾಡನ್ನು ಹಾಡಿದರು. ಅದರ ಅರ್ಥ :

ನಾವು ಬಲ್ಲೆವು ; ಓ ಹೃದಯವೇ !
ಹೊಗೆಯ ಮಧ್ಯದಿ ಬೆಂಕಿ ಇದೆಯೆಂದು.
ನಾವು ಬಲ್ಲೆವು, ಓ ಹೃದಯವೇ !
ಶತೃತ್ವದ ನಡುವೆ ದೇವನಿರುವನೆಂದು.

ದಯೆ ತೋರು, ಓ ಹೃದಯವೇ !
ನಮ್ಮನ್ನು ತಿನ್ನಬಯಸುವ ಹುಲಿಗೂ,
ಏಕೆಂದರೆ ಅದೂ ಒಂದು ರೂಪ
ನಮ್ಮೆಲ್ಲರ ತಾಯಿ ಪರಾಶಕ್ತಿಗೆ.

ಈ ಪದ್ಯವನ್ನು ಕೇಳಿದ ಆ ವ್ಯಕ್ತಿ ಭಾರತಿಯವರ ಪಾದಗಳ ಮೇಲೆ ಬಿದ್ದು ಕ್ಷಮೆ ಕೇಳಿಕೊಂಡ. ಹಾಗೆಯೇ ಚೆಲ್ಲಮ್ಮಾಳ್‌ಭಾರತಿಯವರ ಕ್ಷಮೆಯನ್ನೂ ಕೇಳಿದ.

ಭಾರತಿಯವರ ಪಾಂಡಿಚೆರಿಯ ಈ ರೀತಿಯ ಜೀವನ ಮುಕ್ತಾಯಕ್ಕೆ ಬಂತು. ನವೆಂಬರ್ ೨೦, ೧೯೧೮ರಂದು ಭಾರತಿ ಪಾಂಡಿಚೆರಿಯನ್ನು ಬಿಟ್ಟರು. ಅಲ್ಲಿಂದ ಬ್ರಿಟಿಷ್ ಇಂಡಿಯಾಕ್ಕೆ ಸೇರಿದ್ದ

ಕಡಲೂರಿಗೆ ಬಂದರು. ಕೂಡಲೇ ಅವರನ್ನು ಬಂಧಿಸಲಾಯಿತು. ಆ ನಂತರ ಬಿಡುಗಡೆಯೂ ಆಯಿತು. ಬಿಡುಗಡೆ ಆದಮೇಲೆ ಅವರು ತಮ್ಮ ಪತ್ನಿಯ ಹುಟ್ಟೂರಾದ 'ಕಡಯಂ'ಗೆ ಹೋದರು. ಈ ಸಮಯದಲ್ಲಿ ಅವರು ಅತೀವ ಬಡತನದಲ್ಲಿದ್ದರು. ತಮ್ಮ ಸ್ಥಿತಿಯನ್ನು 'ಎಟ್ಟಾಯಪುರಂ'ನ ರಾಜನಲ್ಲಿ ವಿವರಿಸಿದರು. ಆದರೆ ರಾಜನಿಂದ ಅವರಿಗೆ ಯಾವ ರೀತಿಯ ಪ್ರತಿಕ್ರಿಯೆಯೂ ಸಿಗಲಿಲ್ಲ.

ಮಾರ್ಚ್, ೧೯೧೯ರಲ್ಲಿ ಅವರು ಮತ್ತೆ ಮದರಾಸಿಗೆ ಬಂದರು. ಮತ್ತೆ ತಮ್ಮನ್ನು ತಾವು ರಾಷ್ಟ್ರೀಯವಾದಿ ಚಳುವಳಿಗಳಲ್ಲಿ ತೊಡಗಿಸಿಕೊಂಡರು. ಒಂದು ದಿನ ಮದರಾಸಿನಲ್ಲಿ ಸಭೆಯೊಂದು ಏರ್ಪಾಟಾಗಿದ್ದಿತು. ಈ ವೇಳೆಗೆ ಸರಿಯಾಗಿ ಮಹಾತ್ಮಾ ಗಾಂಧಿ ಮದರಾಸಿಗೆ ಬಂದಿದ್ದರು, ಮತ್ತು ಈ ವಿಷಯವನ್ನು ಭಾರತಿ ಅರಿತಿದ್ದರು. ಗಾಂಧೀಜಿ ತಮ್ಮ ಅಸಹಕಾರ ಆಂದೋಲನಕ್ಕೆ ಜನರ ಬೆಂಬಲ ಸಂಪಾದಿಸುವುದಕ್ಕಾಗಿ ಮದರಾಸಿಗೆ ಬಂದಿದ್ದರು. ಅವರು ರಾಜಾಜಿಯವರ ಮನೆಯಲ್ಲಿಯೇ ಇಳಿದುಕೊಂಡಿದ್ದರು. ಗಾಂಧೀಜಿಯವರ ಮದರಾಸು ಆಗಮನದ ಸುದ್ದಿಯನ್ನು ಅರಿತಿದ್ದ ಭಾರತಿ ಅವರನ್ನು ಭೇಟಿ ಮಾಡಲು ಹೋದರು. ಅದು ಗಾಂಧೀಜಿ–ಭಾರತಿಯವರ ಪ್ರಪ್ರಥಮ ಭೇಟಿ. ಭಾರತಿಯವರನ್ನು ಕುರಿತು ವಿಶೇಷ ಅಧ್ಯಯನ ಮಾಡಿರುವ ಚೀಸಿ ವಿಶ್ವನಾಥನ್ ಎಂಬ ವಿದ್ವಾಂಸರು ಭಾರತಿ ಹಾಗೂ ಗಾಂಧೀಜಿ ನಡುವಣ ಸಂಭಾಷಣೆಯ ವಿವರವನ್ನು ನೀಡಿದ್ದಾರೆ.

ಭಾರತಿ ಯಾರನ್ನೂ ಕೇಳದೆ ಸೀದ ರಾಜಾಜಿಯವರ ಮನೆಯೊಳಕ್ಕೆ ಹೋದರು. ಗಾಂಧೀಜಿ ಯಾರೆಂದು ಗುರುತಿಸಿದರು. ನೇರ ಹೋಗಿ ಗಾಂಧೀಜಿಯ ಪಕ್ಕದಲ್ಲಿ ಕುಳಿತರು.

ಭಾರತಿ : "ಗಾಂಧೀಯವರೇ, ಇಂದು ಸಂಜೆ ೫-೩೦ಕ್ಕೆ ವಳ್ಳಿಕೇಣಿಯಲ್ಲಿ ನಾನೊಂದು ಸಭೆಯನ್ನುದ್ದೇಶಿಸಿ ಮಾತನಾಡಲಿದ್ದೇನೆ. ನೀವು ಅಧ್ಯಕ್ಷತೆ ವಹಿಸುವಿರಾ?"

ಗಾಂಧೀಜಿ : (ತಮ್ಮ ಕಾರ್ಯದರ್ಶಿ ಮಹದೇವ್ ಅವರತ್ತತಿರುಗಿ) "ಮಹದೇವ್! ಇಂದು ಸಂಜೆಗೆ ಏನಾದರೂ ಕಾರ್ಯಕ್ರಮ ಇದೆಯೇ ?"

ಮಹದೇವ್ : "ಇಂದು ಸಂಜೆ ೫-೩೦ಕ್ಕೆ ನಾವು ಬೇರೊಂದು ಕಡೆ ಇರಬೇಕು."

ಗಾಂಧೀಜಿ : "ಹಾಗಿದ್ದಲ್ಲಿ ಇಂದು ಸಾಧ್ಯವಾಗುವುದಿಲ್ಲ. ನಿಮ್ಮ ಕಾರ್ಯಕ್ರಮವನ್ನು ನಾಳಿನ ತನಕ ಮುಂದೂಡಲು ಸಾಧ್ಯವೇ?"

ಭಾರತಿ : "ಇಲ್ಲ; ಅದು ಸಾಧ್ಯವಿಲ್ಲ. ನಾನಿನ್ನು ಹೊರಡುತ್ತೇನೆ ಗಾಂಧೀಜಿ ನೀವು ಪ್ರಾರಂಭಿಸುತ್ತಿರುವ ಆಂದೋಲನಕ್ಕೆ ನನ್ನ ಹಾರೈಕೆ ಇದೆ."

ನಂತರ ಭಾರತಿ ಅಲ್ಲಿಂದ ಹೊರಟುಬಿಟ್ಟರು. ಗಾಂಧೀಜಿ ರಾಜಾಜಿಯನ್ನು ಯಾರೀ ವ್ಯಕ್ತಿ? ಎಂದು ಕೇಳಿದರು. ರಾಜಾಜಿ "ಅವರು ತಮಿಳರ ರಾಷ್ಟ್ರೀಯವಾದಿ ಕವಿ" ಎಂದು ಉತ್ತರಿಸಿದರು. ಅದಕ್ಕೆ ಗಾಂಧೀಜಿ ಹೇಳಿದರು "ಹಾಗಾದರೆ ನೀವು ಇವರನ್ನು ಗಮನದಲ್ಲಿಟ್ಟುಕೊಳ್ಳಬೇಕು" ಎಂದು.

ಅಂದು ಸಂಜೆ ಭಾರತಿಯವರು ಘೋಷಿಸಿದ್ದಂತೆ ಸಾರ್ವಜನಿಕ ಸಭೆ ನಡೆಯಿತು. ಅಲ್ಲಿ ಭಾರತಿ ಒಂದು ಹಾಡನ್ನು ಹಾಡಿದರು. ಅದರ ಸಾರಾಂಶ ಹೀಗಿದೆ :

"ಬಾಳ್ಗೆ ನೀನು ಗಾಂಧಿ ಮಹಾನ್
ಈ ಇಡಿ ದೇಶದಲ್ಲಿಯೂ
ಹಸಿವಿದ್ದಾಗ ಹಾಳಾದಾಗ
ನೀನು ಬಂದೆ ಮಹಾನ್ ಗಾಂಧಿ ಬಾಳ್ಗೆ ಬಾಳ್ಗೆ!"

ಗಾಂಧೀಜಿ ಹಾಗೂ ಭಾರತಿಯವರ ಈ ಭೇಟಿಯ ನಂತರ ಅವರಿಬ್ಬರೂ ಎಂದೂ ಪರಸ್ಪರ ಸಂಧಿಸಲೇ ಇಲ್ಲ. ಈ ಭೇಟಿಯೇ ಅವರಿಬ್ಬರ ನಡುವಣ ಪ್ರಥಮ ಹಾಗೂ ಅಂತಿಮ ಭೇಟಿ ಆಯಿತು. ಆದರೆ, ೧೯೨೮ರ ಸೆಪ್ಟೆಂಬರ್‌ನಲ್ಲಿ, ಬ್ರಿಟಿಷ್ ಸರ್ಕಾರ ಭಾರತಿಯವರ ರಾಷ್ಟ್ರೀಯವಾದಿ ಕವನಗಳನ್ನು ಮುಟ್ಟುಗೋಲು ಹಾಕಿಕೊಂಡಾಗ, ಗಾಂಧೀಜಿ ಬ್ರಿಟಿಷರ ಈ ಕೃತ್ಯವನ್ನು ವಿರೋಧಿಸಿದರು. ಗಾಂಧೀಜಿಯೇ, ಭಾರತಿಯವರ ಕೆಲವು ಕವನಗಳ ಅನುವಾದವನ್ನು "ಯಂಗ್ ಇಂಡಿಯಾ"ದಲ್ಲಿ ಪ್ರಕಟಿಸಿ ಕವಿಯನ್ನು ಪ್ರಶಂಸಿಸಿದರು.

೧೯೨೦ರ ಡಿಸೆಂಬರಿನಲ್ಲಿ ಮತ್ತೆ ಭಾರತಿಯವರು ಸಹಾಯಕ ಸಂಪಾದಕರಾಗಿ "ಸ್ವದೇಶ ಮಿತ್ರನ್" ಪತ್ರಿಕೆಯನ್ನು ಸೇರಿದರು. ೧೯೨೧ರ ಜುಲೈ–ಆಗಸ್ಟ್‌ನಲ್ಲಿ ತಿರುವಳ್ಳಿಕೇಣಿ ದೇವಾಲಯದ ಆನೆಯೊಂದು ಭಾರತಿಯವರ ಮೇಲೆ ಆಕ್ರಮಣ ಮಾಡಿತು. ಅವರು ಆ ಆಕ್ರಮಣದಿಂದ ನಲುಗಿದರೂ ಪುನಃಶ್ಚೇತನಗೊಂಡರು. ಆದರೆ ಮತ್ತೆ ಅತೀವ ಹೊಟ್ಟೆ ನೋವಿನಿಂದಾಗಿ ಖಾಯಿಲೆ ಮಲಗಿದರು. ೧೯೨೧ ಸೆಪ್ಟೆಂಬರ್ ೧೨ರಂದು ಬೆಳಗ್ಗೆ ೧-೩೦ಕ್ಕೆ ಭಾರತಿ ಸ್ವರ್ಗಸ್ಥರಾದರು.

ಈಗ ಭಾರತಿಯವರ ಕೆಲವು ಚಿಂತನೆಗಳತ್ತ ಗಮನ ಹರಿಸೋಣ.

ಭಾರತಿಯವರು ಎಲ್ಲ ದೇಶಕ್ಕೆ, ಎಲ್ಲ ಭಾಷೆಗೆ, ಎಲ್ಲ ಜಾತಿಗೆ ಸೇರಿದ ಎಲ್ಲ ಜನರ ಸಮಾನತೆಯನ್ನು ಬಯಸಿದರು. "ಎಲ್ಲರಿಗೂ ಎಲ್ಲವೂ" ಎಂಬುದೇ ಅವರ ತತ್ತ್ವವಾಗಿತ್ತು. ಇದೇ ಮಾತುಗಳು ಅವರ ಕವನವೊಂದರಲ್ಲಿಯೂ ಬಂದವು. ಎಲ್ಲರಿಗೂ ಎಲ್ಲವೂ ದೊರೆಯುವ ಲೋಕವನ್ನು ಅವರು "ಕೃತಯುಗ" ಎಂದು ಕರೆದರು. "ಆ ಕೃತಯುಗದಲ್ಲಿ ಯಾರಿಗೂ ಹಸಿವು ಇರುವುದಿಲ್ಲ; ಯಾರಿಗೂ ನೋವಿರುವುದಿಲ್ಲ; ಯಾರಿಗೂ ಶತ್ರುತ್ವ ಇರುವುದಿಲ್ಲ" ಎಂದು ಅವರು ಹೇಳಿದರು. ಇದು ಅವರ ಆದರ್ಶ ಸಮಾಜ. ಭಾರತಿಯವರು ಪ್ರಪ್ರಥಮ ಬಾರಿಗೆ 'Socialism'

ಎಂಬ ಮಾತಿಗೆ ಸಮಾನಾರ್ಥವಾಗಿ "ಸಮುಧರ್ಮಂ" ಎಂಬ ಮಾತನ್ನು ಬಳಸಿದರು. ಎಲ್ಲ ಸೌಲಭ್ಯಗಳೂ, ಎಲ್ಲ ಸಂತೋಷವೂ ಸಮಾನವಾಗಿ ಹಂಚಲ್ಪಡಬೇಕು ಎಂದು ಭಾರತಿಯವರು ನಂಬಿದ್ದರು. ಮತ್ತು ಇದನ್ನು ನ್ಯಾಯದ ಆಧಾರದ ಮೇಲೆ ಮಾಡಬೇಕು ಎಂಬುದು ಅವರ ಆಶಯವಾಗಿದ್ದಿತು. ಅಂದರೆ ಭಾರತಿಗೆ ನ್ಯಾಯವೇ ಸಮಾನತೆ ಎಂದಾಗಿತ್ತು. ಅವರು ಬಯಸಿದ್ದು :

"ಹೊಟ್ಟೆಗೆ ಊಟ ಬೇಕು–ಇಲ್ಲಿ
ಬಾಳುವ ಮನುಜರಿಗೆಲ್ಲ".

ತಮ್ಮ ಗದ್ಯ ಕೃತಿಯೊಂದರಲ್ಲಿ ಭಾರತಿ ಈ ವಿಷಯವನ್ನು ಉಗ್ರವಾಗಿ ಪ್ರತಿಪಾದಿಸುತ್ತಾರೆ. ಅವರು ಹೇಳುತ್ತಾರೆ : "ಎಲ್ಲಿ ಎಲ್ಲರಿಗೂ ಆಹಾರವಿಲ್ಲವೋ ಅಲ್ಲಿ ವಾಸಿಸುವ ಶ್ರೀಮಂತ ಒಬ್ಬ ಕಳ್ಳನೇ ಸರಿ. ಆ ಸ್ಥಳದಲ್ಲಿ ಗುರುಗಳೆಲ್ಲರೂ ಸುಳ್ಳರು. ಪಂಡಿತರೆಲ್ಲ ಮೂರ್ಖರು."

ಇಂತಹ ಮನೋಭಾವ ಉಳ್ಳವರಾಗಿದ್ದರಿಂದಲೇ ಭಾರತಿ ರಷ್ಯದ ಮಹಾ ಕ್ರಾಂತಿಯನ್ನು ಪ್ರಶಂಸಿಸಿದ್ದಾರೆ. ರಷ್ಯದ ಕ್ರಾಂತಿಯ ಸುದ್ದಿಯನ್ನು ಕೇಳಿದಾಗ, ಅವರು ರಷ್ಯವನ್ನು ಹೊಗಳಿ ಹೀಗೆ ಹಾಡಿದರು :

"ಕಾಳಿ ಪರಾಶಕ್ತಿ ರಷ್ಯ ದೇಶದಲ್ಲಿ
ಕಣ್ಣು ಹಾಕಿದಳು–ಅಲ್ಲಿ
'ಆಹಾ'ವೆಂದು ಕ್ರಾಂತಿ ಬಂತು.

ಅವರಿಗೆ ಆ ಕ್ರಾಂತಿಯನ್ನು ಕಾಣುವ ಭಾರತೀಯವಾದ ರೀತಿ ಇತ್ತು. ಈ ವಿಶಿಷ್ಟವಾದ ರೀತಿಯ ನೋಟ ಅವರ ಕಾವ್ಯದಲ್ಲಿ ಕಾಣಬಂದಿದೆ.

ಹಾಗೆಯೇ, ಭಾರತಿ–ಉತ್ತಮ ಜಾತಿ, ಅಧಮ ಜಾತಿ ಎಂದು ವ್ಯತ್ಯಾಸಗಳನ್ನು ಎಣಿಸಲಿಲ್ಲ. ಶೋಷಿತ ವರ್ಗದ ಹುಡುಗ ಕನಕಲಿಂಗಂ ಈ ಘಟನೆಯನ್ನು ವಿವರಿಸುತ್ತಾರೆ. ಒಂದು ದಿನ ಕನಕಲಿಂಗಂ ಭಾರತಿ ಯವರನ್ನು ಭೇಟಿ ಮಾಡಲು ಬಂದರು. ಆಗ ಭಾರತಿ ತಮ್ಮ ಬ್ರಾಹ್ಮಣ ಸ್ನೇಹಿತ ಸುಂದರೇಶ ಐಯ್ಯರ್ ಅವರ ಮನೆಯಲ್ಲಿದ್ದರು. ಕನಕಲಿಂಗಂ ಸುಂದರೇಶ ಐಯ್ಯರ್‌ರವರ ಮನೆಯ ಹೊರಗಡೆ ನಿಂತು ಜೋರಾಗಿ "ಸ್ವಾಮೀ...." ಎಂದು ಕರೆದರು. ಭಾರತಿ ಕನಕಲಿಂಗಂಗೆ ಒಳಗೆ ಬರಲು ಹೇಳಿದರು. ಆದರೆ ಕನಕಲಿಂಗಂ ಒಳಗೆ ಹೋಗಲಿಲ್ಲ. ಏಕೆಂದರೆ ಆವರೆಗೂ ಕನಕಲಿಂಗಂ ಬ್ರಾಹ್ಮಣರೊಬ್ಬರ ಮನೆಯೊಳಕ್ಕೆ ಹೋಗಿರಲಿಲ್ಲ. ಅವರು ಇನ್ನೂ ಅಲ್ಲೇ ನಿಂತಿರುವುದನ್ನು ಕಂಡ ಭಾರತಿ, ಉಪ್ಪರಿಗೆಯ ಮೇಲೆ ಬಂದು ಕನಕಲಿಂಗಂಗೆ ಒಳಗೆ ಬರಲು ಕೋಪದ ಧ್ವನಿಯಲ್ಲಿ ಹೇಳಿದರು. ಭಾರತಿಯವರ ಕೋಪಕ್ಕೆ ಹೆದರಿ ಕೊಂಡು ಕನಕಲಿಂಗಂ ಮೊದಲು ಮನೆಯೊಳಕ್ಕೂ ನಂತರ ಉಪ್ಪರಿಗೆಯ ಮೇಲೂ ಹೋದರು. ಅಲ್ಲಿ ಅವರು ಆ ಮನೆಯ ಯಜಮಾನರ ಜೊತೆ ಹಲವಾರು ಬ್ರಾಹ್ಮಣರನ್ನೂ ಕಂಡರು. ಕನಕಲಿಂಗಂಅನ್ನು ಕಂಡ ಭಾರತಿ "ಎಲ್ಲಿ ಭಾರತಿ ಕೂರುತ್ತಾನೆಯೋ ಆ ಜಾಗ ಅಸ್ಪೃಶ್ಯತೆ ಯನ್ನು ಆಚರಿಸುವುದಿಲ್ಲ" ಎಂದರು. ಈ ಘಟನೆ ಅಸ್ಪೃಶ್ಯ ಹಾಗೂ ಶೋಷಿತ ವರ್ಗದ ಬಗ್ಗೆ ಭಾರತಿ ಹೊಂದಿದ್ದ ದೃಷ್ಟಿಕೋನದ ಕಡೆ ಬೆಳಕು ಹಾಯಿಸುತ್ತದೆ.

ಭಾರತಿಯವರ ವ್ಯಕ್ತಿತ್ವದ ಇನ್ನೊಂದು ವೈಶಿಷ್ಟ್ಯವೆಂದರೆ ಪ್ರಶ್ನೆ ಮಾಡದೆ ಯಾವುದನ್ನೂ, ಯಾರನ್ನೂ ಹಿಂಬಾಲಿಸದ ಅವರ ಗುಣ.

ಉದಾಹರಣೆಗೆ, ಗಾಂಧೀಜಿಯ ಕೆಲವು ಆಲೋಚನೆಗಳನ್ನು ಕುರಿತಂತೆ ಭಾರತಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಲು ಇಚ್ಚಿಸಿ ದರು. ಏಕಾದಶ ಗುಣಗಳಲ್ಲಿ 'ಅಹಿಂಸೆ'ಯೂ ಒಂದು ಎಂದು

ಗಾಂಧೀಜಿ ಪ್ರತಿಪಾದಿಸಿದರು. ಹಾಗೂ ಗಾಂಧೀಜಿ ಎಲ್ಲರೂ ಅದನ್ನು ಅನುಸರಿಸಬೇಕೆಂದು ಬಯಸಿದರು. ಆದರೆ 'ಅಹಿಂಸೆ'ಯನ್ನು ಕುರಿತಂತೆ ಭಾರತಿಗೆ ಬೇರೆ ರೀತಿಯ ಅಭಿಪ್ರಾಯವಿತ್ತು. "ಯಾರಾದರೂ ನನಗೆ ಹೊಡೆದಾಗ ನಾನು ಅವರಿಗೆ ಹೊಡೆಯುತ್ತೇನೆ; ಇದರಲ್ಲಿ ಏನೂ ತಪ್ಪಿಲ್ಲ" ಎಂಬುದು ಅವರ ಮಾತು. ಹಾಗೆಯೇ ಭಾರತಿ, ಗಾಂಧೀಜಿಯ ಮತ್ತೊಂದು ತತ್ತ್ವವನ್ನು ಎದುರಿಸುವಲ್ಲಿ ತಮ್ಮ ಧೈರ್ಯವನ್ನು ಪ್ರಕಟಪಡಿಸಿದರು. ಎಲ್ಲರಿಗೂ ತಿಳಿದಂತೆ ಗಾಂಧೀಜಿ 'ಬ್ರಹ್ಮಚರ್ಯ'ವನ್ನು ಬೆಂಬಲಿಸಿದರು. ಆದರೆ ಭಾರತಿಯವರ ಅಭಿಪ್ರಾಯ ಇದಕ್ಕೆ ಸಂಪೂರ್ಣವಾಗಿ ಭಿನ್ನವಾಗಿತ್ತು. "ಎಲ್ಲರೂ ಬ್ರಹ್ಮಚರ್ಯವನ್ನು ಅವಲಂಬಿಸಿದರೆ, ಈ ದೇಶದಲ್ಲಿ ಯಾರೂ ಇರುವುದಿಲ್ಲ" ಎಂದು ಭಾರತಿ ಹೇಳಿದರು. ಗಾಂಧೀಜಿ ಹೇಳಿದ ಏಕಾದಶ ಸದ್ಗುಣಗಳ ಜೊತೆಗೆ ಭಾರತಿ ಇನ್ನೊಂದನ್ನು ಸೇರಿಸಲು ಬಯಸಿದರು. ಅದೆಂದರೆ–ಪ್ರತಿಯೊಬ್ಬ ಮನುಷ್ಯನೂ ಹೆಚ್ಚು ಸಂಪತ್ತನ್ನು ಹೊಂದಬೇಕು ಎಂಬುದು. ಬಹುಶಃ ಈ ಅಂಶ ಗಾಂಧೀಜಿಗೆ ಕೋಪ ತರಿಸಿದ್ದಿರಬಹುದು, ಆದರೆ ಭಾರತಿ ತಮ್ಮ ಅಭಿಪ್ರಾಯ ಮಂಡನೆಯಲ್ಲಿ ಖಂಡಿತವಾದಿಯಾಗಿದ್ದರು. ಇದು ಸುಬ್ರಮಣ್ಯಭಾರತಿಯವರ ವಿಶಿಷ್ಟ ಗುಣವಾಗಿದ್ದಿತು.

ಭಾರತಿ, ಮಹಿಳೆಯರು ಪುರುಷರಿಗೆ ಸಮಾನವಾಗಿ ಬಾಳಬೇಕೆಂದು ಆಶಿಸಿದರು. ಮಹಿಳೆಯರು 'ಪರದಾ' ಧರಿಸುವುದನ್ನು ಅವರೆಂದೂ ಒಪ್ಪಲಿಲ್ಲ. ಹಾಗೆಯೇ ಅವರು ಅತಿಯಾಗಿ ಫ್ಯಾಷನ್ನಿಗೆ ಜೋತುಬಿದ್ದಿದ್ದ ಮಹಿಳೆಯರನ್ನು ಒಪ್ಪಲಿಲ್ಲ. ಅವರು "ಮಹಿಳೆಯನ್ನು ಮನೆಯೊಳಗೆ ಕೂಡಿಹಾಕಬಾರದು" ಎಂದು ಹೇಳುತ್ತಿದ್ದರು. ಸಮಾಜದಲ್ಲಿ ಮಹಿಳೆಯರು ಪುರುಷರಿಗೆ ಸಮಾನವಾಗಿಯೇ ಜೀವಿಸಬೇಕೆಂದು ಬಯಸಿದರು. ಹೃದಯದ ಪರಿಶುದ್ಧತೆ ಇದ್ದರೆ ಪುರುಷರೊಂದಿಗೆ ಮಾತುಕತೆ, ಓಡಾಟಗಳು ತಪ್ಪಲ್ಲವೆಂದು ಭಾರತಿ ನಂಬಿದ್ದರು. ತಾವೇನನ್ನು ಹೇಳಿದರೋ ಅದನ್ನು ತಮ್ಮ ಜೀವನದಲ್ಲೂ ಅವರು ಅಳವಡಿಸಿಕೊಂಡಿದ್ದರು.

ತಮ್ಮನ್ನು ನೋಡಲು ಯಾರಾದರೂ ಬಂದರೆ, ತಮ್ಮ ಮನೆಯ ಹೆಂಗಸರೇ ಆಗಂತುಕರನ್ನು ಸ್ವಾಗತಿಸಿ ತಮ್ಮ ಬಳಿಗೆ ಕರೆತರಬೇಕೆಂದು ಆಶಿಸಿದರು.

ಅವರ ಅಭಿಪ್ರಾಯದಲ್ಲಿ ಸ್ತ್ರೀಯರು ಯಾರಿಗೂ ಹೆದರಬಾರದು. ಅವರು ನೇರವಾಗಿಯೇ ನಡೆಯಬೇಕು. ಕತ್ತು ಬಗ್ಗಿಸಿ ಅಲ್ಲ. ಯಾರಾದರೂ ಯುವಕ, ಒಬ್ಬ ಯುವತಿಯ ಕಡೆ ಕೆಟ್ಟ ದೃಷ್ಟಿಯಿಂದ ನೋಡಿದ್ದೇ ಆದರೆ, ಆ ಯುವತಿ ನಿಷ್ಠುರ ನೋಟದಿಂದ ಅವನನ್ನು ನೋಡಬೇಕು. ಹುಡುಗನೇ ದೃಷ್ಟಿ ಬಗ್ಗಿಸಬೇಕು. ಇದು ಭಾರತಿಯವರ ಆಲೋಚನೆ. ಕೆಟ್ಟ ಗಂಡಸರ ಮುಖದ ಮೇಲೆ ಉಗಿಯುವಂತೆ ಅವರು ತಮ್ಮ ಹೆಣ್ಣುಮಕ್ಕಳಿಗೆ ಹೇಳುತ್ತಿದ್ದರು. ಮಹಿಳೆಯರ ಬಗ್ಗೆ ಮತ್ತು ಮಹಿಳೆಯರ ಅಭಿವೃದ್ಧಿಯ ಬಗ್ಗೆ ಭಾರತಿ ಬಹಳಷ್ಟು ಬರೆದಿದ್ದಾರೆ. ಮಹಿಳೆಯರು ಭಾರತದ ನೂತನ ಮಹಿಳೆಯರಾಗಬೇಕೆಂದು ಅವರು ಬಯಸಿದರು. ಮಹಿಳೆಯರು ಒಂದು ಹೊಸ ರೀತಿಯ ಜೀವನ ನಡೆಸಬೇಕೆಂದು ಅವರ ಆಶಯವಾಗಿದ್ದಿತು.

"ಜಗದ್ರಕ್ಷಕ ದೇವನಿಂದ
ದತ್ತವಾಗಿಹುದು ಬುದ್ಧಿ ಮಹಿಳೆಗೆ
ನಾಶ ಮಾಡುತಿಹರವನು ಕೆಲರು
ಮೂರ್ಖರು, ಬಂದಿಲ್ಲಿ ಇಳೆಗೆ.

ಇರುವೆರಡು ಅಕ್ಷಿಗಳಲ್ಲಿ ತಿವಿದು ಒಂದ,
ದೃಷ್ಟಿ ಶಕ್ತಿಯನು ನಾಶಪಡಿಸಲುಬಹುದೇ ?
ಬೆಳಸಿದರೆ ಮಾನಿನಿಯಲ್ಲಿ ಜ್ಞಾನದ ಕುಡಿಯೊಂದ,
ಅಜ್ಞಾನವಾಗುವುದು ಶಬ್ದ ಬರಿದೇ.

ಹೀಗೆ ಮಹಿಳೆಯರ ಬಗ್ಗೆ ಭಾರತಿಯವರ ಅಭಿಪ್ರಾಯವಿದ್ದಿತು.

ಶಕ್ತಿ, ಮುಂತಾದ ಹಿಂದೂ ದೇವತೆಗಳ ನಿಷ್ಠಾವಂತ ಭಕ್ತರಾಗಿದ್ದರೂ ಸಹ, ಭಾರತಿ ತಮ್ಮ ಜೀವನದಲ್ಲಿ ಬರಬರುತ್ತ ಅಲ್ಲಾ ಹಾಗೂ ಯೇಸುವನ್ನೂ ಹಾಡಿ ಹೊಗಳುತ್ತಿದ್ದರು.

ಈ ಕವನ ಯೇಸುವನ್ನು ಕುರಿತದ್ದು :

“ಬಂದಿರುವನಿಲ್ಲಿ ದೇವನು
ಸತ್ತು ಶಿಲುಬೆಗೇರಲು, ಮತ್ತೆ
ಮೂರು ದಿನದಲ್ಲಿ ಪುನರುತ್ಥಾನಗೊಳಲು.
ಇದಕೆ ಪ್ರೀತಿಯ ಮಾರಿಯಾ ಮೆಗ್ದಲಿನಾಳೇ
ಪ್ರತ್ಯಕ್ಷ ಸಾಕ್ಷಿ.
ಇದರರ್ಥ ಬೇಕೆನಿಸಿದರೆ
ಕಿವಿಗೊಡಿ ದೇಶಬಾಂಧವರೇ,
ನಾವೇ ನಮ್ಮ ಅಹಂಕಾರವ
ಸಿಗಿದು ಸಿಲುಬೆಗೇರಿಸಿದರೆ, ಬರುವ ದೇವನು
ನಮ್ಮೊಳಕ್ಕೆ ನಮ್ಮನ್ನು ರಕ್ಷಿಸಲು.

ಈ ಕವನ ಭಾರತಿಯವರ ಪರಮಿತ ಪ್ರೀತಿಗೆ ಸಾಕ್ಷಿಯಾಗಿದೆ.

ಅಲ್ಲಾನ ಮೇಲೆಯೂ ಭಾರತಿ ಹಾಡಿದರು. ಭಾರತಿಯವರ ಜೀವನಚರಿತ್ರಕಾರರಾದ ಚೆಲ್ಲಮ್ಮಾಳ್ ಅವರ ಪ್ರಕಾರ, ಜೈಲಿನಿಂದ ಬಿಡುಗಡೆ ಹೊಂದಿದ ಕೂಡಲೇ ಭಾರತಿ ತಮ್ಮ ಪತ್ನಿಯ ಹುಟ್ಟೂರಾದ ಕಡಯಂಗೆ ಹೋದರು. ಅಲ್ಲಿ ಅವರು ಇಸ್ಲಾಂನ ಮಹತ್ವವನ್ನು ಕುರಿತು ಉಪನ್ಯಾಸಗಳನ್ನು ನೀಡುತ್ತಿದ್ದರು. ಹತ್ತಿರದ ಹಳ್ಳಿಗಳಲ್ಲಿದ್ದ ಮುಸ್ಲಿಮರೆಲ್ಲ, ಇವರ ಉಪನ್ಯಾಸವನ್ನು ಕೇಳಿ ಆನಂದಿಸಲೆಂದು ಕಡಯಂಗೆ ಬರುತ್ತಿದ್ದರು. ಅಲ್ಲಾನ ಮೇಲೆಯೂ ಭಾರತಿ ಕವನವನ್ನು ರಚಿಸಿದರು.

ಭಾರತಿಯವರ ವಿಶಾಲ ಮನೋಭಾವ ಯಾವುದೇ ಮತವನ್ನು ಪ್ರೀತಿಸಬಲ್ಲುದಾಗಿದ್ದಿತು. ಇದು–ಈ ವಿಶಾಲ ಮನೋಭಾವ–ಅವರಿಗೆ ಒಂದು ದರ್ಶನವನ್ನು ನೀಡಿತು. ಅದು ಎಲ್ಲವನ್ನು ಒಳಗೊಳ್ಳುತ್ತಿತ್ತು, ಹೊರದೂಡುತ್ತಿರಲಿಲ್ಲ. ಅದು ಪ್ರೀತಿಯ ನೆಲೆಗಟ್ಟಿನ ಮೇಲೆ ನಿಂತದ್ದು ದ್ವೇಷದ ಮೇಲಲ್ಲ.

೧. ಭಾರತಿಯಾರ್ ಚರಿತ್ರಂ
—ಚೆಲ್ಲಮ್ಮಾಳ್ ಭಾರತಿ, ಶಕ್ತಿ ಕಾರ್ಯಾಲಯಂ, ಮದರಾಸ್, ೧ ೪೫

೨. ಮಹಾಕವಿ ಭಾರತಿಯಾರ್ ಕವಿತೆಗಳ್
—ಅರಣಾ ಪದಿಪ್ಪಕಂ, ಮಧುರೈ, ೧೯೬೮

೩. ಭಾರತಿಯಾರ್ ಕವಿಗಳ್
—ಪೂಂಪುಗಾರ್ ಪ್ರರಸುರಂ, ಚೆನ್ನೈ, ೧೯೭೬

೪. ಮರುಮಲರ್ಚಿ ಕವಿಞರ್
—ಚೀಸಿ ವಿಶ್ವನಾಥನ್, ಬಾಲಾಜಿ ಪುಸ್ತಕ ನಿಲಯಂ,
ಶ್ರೀ ಭುವನೇಶ್ವರಿ, ಪದಿಪ್ಪಕಂ, ಚೆನ್ನೈ, ೧೯೮೨

೫. ಪುದುಮೈಯಿಲ್ ಭಾರತಿ
—ಸಂಬಂದಂ, ಮಣಿವಾಸಗರ್, ಪದಿಪ್ಪಕಂ, ಚಿದಂಬರಂ, ೧೯೮೨

೬. ಭಾರತಿ ಆಯ್ವುಗಳ್
—ಚೀಸಿ ವಿಶ್ವನಾಥನ್, ಶ್ರೀ ಭುವನೇಶ್ವರಿ ಪದಿಪ್ಪಕಂ, ಚೆನ್ನೈ, ೧೯೮೫



ಸಾಮಾಜಿಕ ಚಿಂತನ ಮಾಲೆ